ಅಪರಂಜಿ

ಜುಲೈ

1995

ಕಿಲಿನಗೆಯ ಕಾರಂಜಿ



* ಪ್ರಕಾಶ್
* ಡಾ|| ಕೆ. ಜಿ. ಜಿ. ಮೂರ್ತಿ
* ಎಂ. ಎನ್. ಕೆ.
* ಝುಸು
* ಅ. ರಾ. ಸೇ.
* ಬಿ. ಎಸ್. ಪ್ರಭಾಕರ್
* ಪ್ರಭಾ
* ಬಿ. ನ. ನರಹರಿ
* ಶ್ರೀಮತಿ ಅರುಣಾ ಆರ್. ಕಾರಂತ
* ನಂದಿನಿ ಕಾಪಡಿ

ಬಿಡಿ ಪ್ರತಿ: 2 ರೂ. 50 ಪೈ.

ಸಂಪುಟ ೧೨ ಜುಲೈ ೧೯೯೫ ಸಂಚಿಕೆ ೧೦

ಈ ಸಂಚಿಕೆಯಲ್ಲಿ

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :
ಶಿವಕುಮಾರ್

ಚಂದಾ ವಿವರ :
ಬಿಡಿ ಪ್ರತಿ :
2 ರೂ 50 ಪೈಸೆ
ವಾರ್ಷಿಕ ಚಂದಾ
25 ರೂ.

ಆಜೀವ ಚಂದಾ :
250 ರೂ.

ವಿಳಾಸ :
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಿಗ್ಗೆ 8 ರಿಂದ
10 ಗಂಟೆಯವರೆಗೆ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು - 560 003

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೧೨ ಜುಲೈ ೧೯೯೫ ಸಂಚಿಕೆ-೧೦

ನಸ್ಥಾನತೋಽಪಿ ಪರಸ್ಯೋಭಲಿಂಗಂ ಸರ್ವತ್ರಹಿ

–ಬ್ರಹ್ಮ ಸೂತ್ರಗಳು.

ಮತದಾರನು ವೋಟು ಕೊಟ್ಟಮೇಲೆ ಹಗ್ಗ ಕೊಟ್ಟು ಕೈ ಕಟ್ಟಿಸಿ ಕೊಂಡನಷ್ಟೇ. ಆ ಪ್ರತಿನಿಧಿಯನ್ನು ಹೇಗೆಂದು ಉಪಾಸನೆ ಮಾಡಬೇಕು.

ಸರ್ವ ಕರ್ಮ, ಸರ್ವ ಕಾಮ, ಸರ್ವಗಂಧನು, ಸರ್ವರಸನು ಎಂದು ಅವನನ್ನು ಒಲಿಸಿ ಕೊಳ್ಳ ಬೇಕೇ ? ಯತ್ನಿಸ ಬಹುದು. ಆದರೆ ಸರ್ವವೂ ಆತ್ಮಾರ್ಥವಾಗಿಯೇ ಬೇಕೆಂಬ ಅವನಿಗೆ ಎಷ್ಟಿದ್ದರೂ ಸಾಲದು. ನೀನು ಯಾವ ಗಿಡದ ತೊಪ್ಪಲು ! ಆದ್ದರಿಂದ ಅವನೆಷ್ಟೇ ದಪ್ಪಗಿದ್ದರೂ, ತೆಳ್ಳಗಿದ್ದರೂ, ಮೊಟುಕು ಬುದ್ಧಿಯುವನಾಗಿದ್ದರೂ, ದೂರದರ್ಶಿಯಲ್ಲದಿದ್ದರೂ, ಸಕಲ ಗುಣ ಗಣಗಳೂ ಇವೆಯೆಂದು ಹೇಳಬೇಕು ? ಅವನಿಂದ ತನಗೇನು ದೊರಕದೆಂದು ನಿರ್ಧರಿಸಿ, ಇದ್ದಷ್ಟರಲ್ಲಿಯೇ ನಿದ್ದೆ ಹೊಡೆಯ ಬೇಕು, ಕಾಲ ಬಂದಾಗ ಮತ್ತೆ ಬಂದು ಎಬ್ಬಿಸಿ ನಿನ್ನ ವೋಟು ಪೋಲಾಗುವಂತೆ ಮಾಡುತ್ತಾರೆ ಎನ್ನುವುದೇ ಸಿದ್ಧಾಂತವು, ಅವನು ನಿರ್ಗುಣನು, ಏಕೆಂದರೆ ಸರ್ವ ಕಾಮಗಳೂ ಅವನಲ್ಲಿವೆ.

ಇನ್ನು ಈ ವೇದಾಂತ ಸೂತ್ರದಲ್ಬಾದರೋ ಬ್ರಹ್ಮವು ಸಗುಣವೂ ನಿರ್ಗುಣವೂ ಆಗಿದೆ ಎಂಬುದರಲ್ಲಿ ವೇದಾಂತಕ್ಕೆ ಮತವಿಲ್ಲ, ಬ್ರಹ್ಮವು ನಿರ್ವಿಶೇಷವೆನ್ನುವುದೇ ಸಿದ್ಧಾಂತವು.



ಪ್ರಕಾಶ್

ಸಮ್ಮಿಶ್ರ ಸರ್ಕಾರ ; ಶ್ರೀ ಹೆಗಡೆ ಸಲಹೆ

–ಸುದ್ದಿ

ಈಗಿರುವ ಖೇಯಾಸ್ ಸಾಲದೇನು ? !

* * *

ಕಂಪ್ಯೂಟರ್‌ನಲ್ಲಿ ವ್ಯಕ್ತಿತ್ವದ ರೂಪರೇಷೆ

–ಪತ್ರಿಕೆ

ನಂ ರಾಜಕಾರಣಿಗಳು, ಈ ಕಂಪ್ಯೂಟರ್‌ನ ಸಹ ಕನ್‌ಫ್ಯೂಸ್ ಮಾಡ ಬಲ್ಲರು !

* * *

ವರ್ಗಾವಣೆ–ಸಚಿವರು ಅಂತ ಏಕೆ ಕರ್ನಾಟಕದಲ್ಲಿ ಖಾತೆ ತೆಗೆಯ ಬಾರದು ? ?

* * * *

ರಾಯಚೂರು, ಇನ್ನೆರಡು ಶಾಖೋತ್ಪನ್ನ ಘಟಕಗಳ ನಿರ್ಮಾಣ

–ಸುದ್ದಿ

ಯಾಕೆ ? ಅಲ್ಲಿ ಶೆಖೆ ಸಾಲದಂತೇನು ? !

• • • •

ಕೊನೆಗೂ, ಮುಲಾಯಂ ಉಚ್ಚಾಟನೆಗೆ ಮಾಯೆಯೇ ಬರ ಬೇಕಾಯಿತು !!

*　　*　　*

ಐ. ಎಫ್. ಎಸ್, ಅಧಿಕಾರಿಗಳ ವರ್ಗಾವಣೆ

—ಸುದ್ದಿ

ಪಾಪ, ಅವರ ರೋದನ ಯಾರಿಗೂ ಕೇಳಿಸಲಿಲ್ಲ ! !

*　　*　　*　　*

ಶ್ರೀ ಅಂತುಳೆ ಕೇಂದ್ರಕ್ಕೆ ಸೇರುವ ಸಂಭವ

—ಪತ್ರಿಕೆ

ಗವಾಕ್ಷಿಗಳು ತೆರೆದಂತಿವೆ !

*　　*　　*

ಶ್ರೀಮತಿ ಮಾರ್ಗರೆಟ್ ಆಳ್ವ ಅವರಿಗೆ ಬಡ್ತಿ ?

—ಸುದ್ದಿ

ಈಗ ಕರ್ನಾಟಕಕ್ಕೆ ಮಾರ್ಗ-ದರ್ಶನ ಸುಸೂತ್ರ !

*　　*　　*　　*

ತಿವಾರಿ ಬಣ್ಣಕ್ಕೆ ಹಸ್ತದ ಚಿಹ್ನೆ ಇಲ್ಲ

—ಸುದ್ದಿ

ಶೇಷನ್ ತಿವಾರಿಗೆ 'ಕೊಟ್ಟ' ಹಾಗಾಯಿತು !

*　　*　　*

ಅವರವರ ಚಿಂತೆ ಅವರಿಗೆ

ಡಾ|| ಕೆ. ಜಿ. ಜಿ. ಮೂರ್ತಿ

ಅಜ್ಜ, ಅಜ್ಜಿ, ಅಪ್ಪ, ಅವ್ವ, ಹಾಗೂ ಮೊಮ್ಮಗಳು-ಹೀಗೆ ಒಂದು ಕುಟುಂಬದಲ್ಲಿ ಎಲ್ಲರೂ ಕಿವುಡರು.

ಅಪ್ಪ ಬೆಳಿಗ್ಗೆ ಎದ್ದು ಹೊಲದಕಡೆ ಹೋಗಿದ್ದ. ಅಲ್ಲೇ ಹೋಗುತ್ತಿದ್ದ ದಾರಿ ಹೋಕ ಕೇಳಿದ

"ಈ ದಾರಿ ಕೆಂಪನ ಹಳ್ಳಿಗೆ ಹೋಗುತ್ತಾ" ಇದಕ್ಕೆ ಕಿವುಡ,
"ಹೌದು, ಇದು ನನ್ನದೇ ಹೊಲ" ಎಂದ, ದಾರಿ ಹೋಕ ಮತ್ತೆ ಕೇಳಿದ,

"ಅಲ್ಲ ಸ್ವಾಮಿ, ಈ ದಾರಿ ಕೆಂಪನ ಹಳ್ಳಿಗೆ ಹೋಗುತ್ತಾ" ಕಿವುಡ ಮತ್ತೆ ಅದೇ ಉತ್ತರ ಕೊಟ್ಟ,

"ಹೌದು, ಆ ಕಬ್ಬು, ಈ ಭತ್ತ ಎಲ್ಲಾ ನನ್ನದೆ"
ಒಳ್ಳೆ ಕಿವುಡನ ಸಹವಾಸ ಆಯಿತಲ್ಲ ಎಂದು ತನ್ನ ದಾರಿತಾನು ಹಿಡಿದ.

ಮನೆಗೆ ಬಂದವನೇ ರೈತ ತನ್ನ ಹೆಂಡತಿಗೆ ಅಭಿಮಾನದಿಂದ ಹೇಳಿದ,
"ಕೇಳೇ ಇಲ್ಲಿ ಬೆಳಿಗ್ಗೆ ಹೊಲದ ಕಡೆ ಹೋದಾಗ ಒಬ್ಬ ದಾರಿ ಹೋಕ ಈ ಹೊಲವೆಲ್ಲಾ ನಿನ್ನದಾ ಎಂದು ಕೇಳಿದ, ನಾನೂ ಹೌದು ಎಂದೆ. ನನ್ನಮಾತು ನಂಬಿ ಬಿಟ್ಟ"

ಆಕೆಯೂ ಕೆಪ್ಪಿ, ಆಕೆಯ ಚಿಂತೆ ಆಕೆಗೆ, ಹೇಳಿದಳು "ಮಹಾರಾಯ ಯಾರು ನಿನಗೆ ಸಿಲ್ಕಿನ ಸೀರೆ ತರಲು ಹೇಳಿದರು ಇದ್ದ ಸೀರೆ ಹರಿದು ಜಾಳಿಗೆ ಯಾಗಿದೆ. ಈ ವಾರ ಸಂತೆಗೆ ಹೋದಾಗ ಎಂತಹದ್ದೋ ಒಂದು ತಾ"

ಗಂಡ ಹೊಸ ಸೀರೆ ತರುತ್ತಾನೆ ಎಂದು ಸಂತೋಷಗೊಂಡ ಆಕೆ ತನ್ನ ಮಗಳ ಕಡೆಗೆ ಹೋಗಿ

"ನಿಮ್ಮಪ್ಪ ಈ ವಾರ ನನಗೆ ಒಂದು ಹೊಸ ಸೀರೆ ತರುತ್ತಾರೆ" ಎಂದು ಹೇಳಿದಳು. ಮಗಳೇನು ಕಡಿಮೆ, ಆಕೆಯೂ ಕೆಪ್ಪಿ,

"ಇಂಜಿನಿಯರ್, ಡಾಕ್ಟರ್‌ಬೇಕು ಅಂತ ನಿಮಗೆ ಯಾರು ಕೇಳುತ್ತಾರೆ, ಎಷ್ಟು ದಿನ ಅಂತ ಮನೆ ಹಿಡಿದು ಕೂಡಲಿ, ಕುರುಡನ್ನೊ, ಕುಂಟನೋ ಯಾರೋ ಒಬ್ಬರಿಗೆ ಕೊಟ್ಟು ಈ ವರ್ಷ ನನ್ನ ಮದುವೆ ಮಾಡ್ರಿ" ಎಂದಳು,

ಅಪ್ಪ-ಅವ್ವ ನನಗೆ ಮದುವೆ ಮಾಡುವ ತಯಾರಿಯಲ್ಲಿದ್ದಾರೆ. ಎಂದು ಸಂತೋಷಗೊಂಡ ಆಕೆ ಈ ಒಳ್ಳೆಯ ಸುದ್ಧಿಯನ್ನು ತನ್ನ ಅಜ್ಜಿಗೆ ವರದಿ ಮಾಡಿದಳು. ಕೆಪ್ಪಿ ಅಜ್ಜಿ ಆಕೆ ಹೇಳಿದ್ದನ್ನೆ ಪೂರಾ ಕೇಳಿಸಿಕೊಂಡು ಹೇಳಿದಳು

"ಮಹಾರಾಯಿತಿ, ಬಿಸಿ ಬಿಸಿ ಊಟ ಬೇಕು ಅಂತ ನಿಮ್ಮನ್ನು ಯಾರು ಕೇಳಿದರು. ತಂಗ್ಳೊ, ತರಿಯೋ ಅದನ್ನೇ ಹೊತ್ತಿಗೆ ಸರಿಯಾಗಿ ಹಾಕಿದರೆ ಸಾಕು"

ಮಗ-ಸೊಸೆ ಮಾತಾಡಿದ್ದನ್ನು ಮೊಮ್ಮಗಳು ಕೇಳಿರಬೇಕು. ಇನ್ನು ನಮಗೆ ಹೊತ್ತೊತ್ತಿಗೆ ಊಟ-ತಿಂಡಿ ಸಿಗುತ್ತದೆ. ಎಂಬ ಸಂತೋಷದಲ್ಲಿ ಅಜ್ಜಿ ಮೊಮ್ಮಗಳು ಹೇಳಿದ್ದನ್ನೇ ಅಜ್ಜನಿಗೆ ವರದಿಮಾಡಿದಳು. ಅಜ್ಜಿ ಹೇಳಿದ್ದನ್ನೆ ಕೇಳಿಸಿಕೊಂಡ, ಮುಪ್ಪಿನಿಂದ ಹಾಸಿಗೆ ಹಿಡಿದಿದ್ದ ಅಜ್ಜ ಹೇಳಿದ.

"ಶರಣರ ಸಮ್ಮೇಳನ ಕರೆದು, ದೊಡ್ಡದಾಗಿ ಕೈಲಾಸ ಸಮಾರಾಧನೆ ಮಾಡು ಅಂತ ಯಾರು ಹೇಳುತ್ತಾರೆ ಅವನಿಗೆ ಮರ್ಯಾದೆಯಿಂದ ಸತ್ತದಿನವೇ ನನ್ನನ್ನು ಮಣ್ಣು ಕಾಣಿಸಿದರೆ ಅದೇ ಸಾಕು.

ಅಷ್ಟು ತೋಚ್ಬೇಡ್ವೇನ್ರೀ ?

ಎಂ. ಎನ್. ಕೆ.

"ಅಯ್ಯೋ, ಇಲ್ನೋಡ್ರಿ ಪೇಪರ್ನ್ಲೀ, ನಾಕ್ದಿನ ರಜಾಂತಿದ್ಯೆಲ್ರೀ, ಈಗೇನ್ರಿ ಮಾಡೋದೂ"

"ಇರ್ಲಿ ಬಿಡೇ, ನಿಂಗ್ಯಾಕೇ ಈ ಅಳು, ದಿನಾ ರಜಾ ಇರೋ ನಂಗೂ ನಿಂಗೂ ಏನೇ ಕಷ್ಟ".

"ನೀವೋ, ನಿಂಬುದ್ಧೀನೋ, ದೇವ್ರೇ ಕಾಪಾಡ್ಬೇಕು, ನಿಮ್ಗೆ ಸ್ವಲ್ಪಾನೂ ಮುಂದಾಲೋಚನೇನೇ ಇಲ್ವಲ್ರೀ, ಆ ಪುಣ್ಯಾತ್ಮ ಈಗಲೇ ಹೋಗ್ಬೇಕಾ ? ಈ ಸರ್ಕಾರದೋರು ಇದೇ ಛಾನ್ಸ್ ನೋಡ್ಕೊಂಡು ಇದ್ದ ಎರಡ್ದಿನ ರಜಕ್ಕೆ ಇನ್ನೆರಡು ದಿನ ಶೋಕ ಸೇರ್ಸಿ ನಾಕ್ದಿನ ಮಾಡಿದ್ದಾರೆಲ್ರೀ"

"ಆಗ್ಲೇ ಹೇಳಿದ್ನಲ್ಲೇ, ಹಾಯಾಗಿ 24 ಘಂಟೆ ಬರೋ ಶೋಕ ಸಂಗೀತ ಕೇಳೋದು TVಲೀ, ಸಧ್ಯಕ್ಕೆ ಹೋಟ್ಲು ಗೀಟ್ಲು ಮುಚ್ಚೀಂತ ಮಾಡ್ಲಿಲ್ವಲ್ಲ, ಅದೇ ನಮ್ಮ ಪುಣ್ಯ."

"ಸಾಕ್ರೀ ನಿಮ್ಮ ಬುದ್ಧಿವಂತಿಕೇ. ಸಂಜೇ ನಾಲ್ಕು ಗಂಟೇಗೇ ನಿಮ್ಮ club ಗೆ ಹೋಗಿ ಕೂತ್ಬಿಡ್ತೀರಾ. ನಿಮ್ಗೇನು ಕಷ್ಟ, ನನ್ನ ಹೋಟೇಲ್ಗೆ ಕರ್ಕೊಂಡ್ಹೋಗಿದ್ರು ಅಷ್ಟಲ್ಲೀ ಇದೆ. ನಾನು ಹೇಳ್ತಿರೋದು ಈ ಪಕ್ಕದ ಮನೇ ವಕ್ರಾರೀ, ಆ ಬ್ಯಾಂಕ್ ನಲ್ಲಿದ್ದಾರಲ್ಲಾ ಗಂಡ–ಹೆಂಡ್ತಿ, ಒನ್ನೆ ಟೂರ್ ಪ್ರೋಗ್ರಾಂ ಹಾಕ್ಬಿಡ್ತಾರೇರೀ".

"ಅವ್ರಲ್ದೇ ಇನ್ಯಾರೇ ಹಾಕ್ಬೇಕು ? ಯಂಗ್ ಕಪಲ್ ಮಜವಾಗಿರ್ಲಿ ಬಿಡು, ಇಬ್ರಿಗೂ LTC ಸಿಗುತ್ತೆ. ಬರೋ ಶನಿವಾರಾನೂ ಅವರ ದುಃಖ extend ಮಾಡಿವ್ರೆ ಹೋಲ್ ವೀಕ್ ರಜ, ಪಾಪ ಕಾಶ್ಮೀರ ನೋಡಿಲ್ಲಾಂತಿದ್ರು, ಈಗ ಹೋಗೋ ಹಾಗಿಲ್ವಲ್ಲಾ, ಅನ್ಯಾಯ, ಅನ್ಯಾಯ".

"ನಿಮ್ಮ ಬುದ್ಧೀಗಿಷ್ಟು. ಆ ಬ್ರಹ್ಮ ಅದೇನು ಕೊಟ್ಟಿಸೋ ನಿಮ್ಮ ತಲೇಗೆ. ಸ್ವಲ್ಪಾನೂ ಮುಂದಾಲೋಚನೇನೆ ಇಲ್ವಲ್ರೀ. ಅಪ್ಪ ಆ ಶನಿ ಮುಂಡೇದು ನಾಯೀನ ನಮ್ಮನೇಲೇ ಬಿಡಲ್ವೇನ್ರೀ. ಹೋದ್ಸಲ ಆ ನಾಯಿ ಸೇವೇ ಮರೀತೇನ್ರೀ. ಅದನ್ನ ವಾಕಿಂಗ್ ಕರ್‍ಕೊಂಡ್ಹೋಗಿ, ಬೀದಿ ನಾಯಿಗಳ ಕೈಲಿ ಪರಿಚಿಸಿ ಕೊಂಡು ಬರ್‍ಲಿಲ್ವಾ ನೀವು ?"

"ಮರ್‍ತೇ ಹೋಯ್ತಲ್ಲೇ."

"ಮರೀದೀರಾ ಮತ್ತೆ. ಅರವತ್ತೋ. ಅರಳು ಮರುಳೋ. ನೀವೋ ಮೊದ ಲಿಂದಾ ಅರಳು ಮರುಳು. ಆ ನಾಯೀನೋ. ಬರೀ ಮುದ್ದು ಮಾಡಿ ಬೆಳೆಸಿದ್ದಾರೆ. ಬೆಳಿಗ್ಗೆ ಅರ್ಧ ಲೋಟ ಸ್ಟ್ರಾಂಗ್ ಕಾಫಿ ಕೊಡದಿದ್ರೆ ಸುಮ್ಮನೇ ಕಯ್, ಕುಯ್ ಅಂತ ಅಳುತ್ತೆ. ಅಲ್ಲಿಂದಾ ಶುರು ಅದರ ಆರೈಕೆ. ಅರ್ಧರ್ಧ ಗಂಟೇಗೂ ಏನಾರೂ ಹೊಟ್ಟೇಗ್ಹಾಕ್ಬೇಕು. ಇಲ್ದಿದ್ರೆ ಅದರ ಗೋಳು ತಡೆಯುಕ್ಕಾಗಲ್ಲ. ನಂಗೆ ಪೂಜೆ, ಪುನ ಸ್ಕಾರ ಮಧ್ಯಾಹ್ನದ ನಿದ್ದೆ ಎಲ್ಲಾ ಖೋತ ಇನ್ನಾಲ್ಕು ದಿನ."

"ಈ ಡೇಂಜರ್ ನಂಗೆ ಹೊಳೀಲೇ ಇಲ್ವಲ್ಲೇ"

"ನಿಮ್ಗೆಲ್ಲಿ ಹೊಳಿಯುತ್ತೆ, ಆ ಹೊಳಿಯೋ ಬುದ್ಧಿ ಇದ್ದಿದ್ರೇ ನಾನ್ಯಾಕೆ ಹೀಗಿರ್‍ತಿದ್ದೆ. ಹೋದ್ಸಲ ಆ ವೈಯ್ಯಾರೀ ಊರಿಂದ ಬಂದು ನಾಯೀನ ಎತ್ಕೊಂಡು 'ಅಯ್ಯೋ ಮರೀ, ಮೂರು ದಿನದಲ್ಲಿ ಎಷ್ಟು ಇಳಿದು ಹೋದ್ಯೋ' ಅಂತ ಹೇಳ್ಕೊಂಡು Thanks ಕೂಡ ಹೇಳ್ದೆ ಹೋದ್ಲಲ್ಲ, ನೆನೆಸ್ಕೊಂಡ್ರೆ ಮೈಯ್ಯೆಲ್ಲಾ ಉರಿದ್ಹೋ ಗುತ್ತೆ."

"ಆ ಕೋಪಾಯೆಲ್ಲಾ ನನ್ನ ಮೇಲೆ ಆಮೇಲೆ ತೀರಿಸ್ಕೊಂಡ್ಯಲ್ಲಾ".

"ನಿಮ್ಗೆ ನನ್ನ ತಮಾಷೇ ಮಾಡೋದೊಂದು ಚೆನ್ನಾಗಿ ಗೊತ್ತು. ನೀವು ಬೇಗ ಹೋಗಿ ಒಂದು ಟೂರ್ ಬುಕ್ ಮಾಡಿ ನನ್ನ ಆ ನಾಯೀ ಇಂದ ಕಾಪಾಡ್ದಿದ್ರೆ ನಂಗೆ ಹುಚ್ಚು ಹಿಡಿದ್ಹೋಗುತ್ತೇ."

"ಒಳ್ಳೇ ಐಡಿಯಾ ಕಣೆ. ಎಲ್ಲೀ ಸ್ವಲ್ಪ ದುಡ್ಡು ಕೊಡು, ಈಗ್ಲೇ ಹೋಗಿ ಬುಕ್ ಮಾಡ್ತೀನೀ"

"ದುಡ್ಡೂ, ನನ್ನ ಹತ್ರಲ್ಲಿದೆ. ನೀವು ಬ್ಯಾಂಕ್ ಮುಚ್ಕೊಕ್ಮುಂಚೆ ತರಲಿಲ್ವಾ?"

"ಅಲ್ವೇ, ನನ್ನ ಪೆನಷನ್ ಡ್ರಾ ಮಾಡೋಕ್ಮುಂಚೆ ಆ ಮನುಷ್ಯ ಗೊಟಕ್ ಅಂದ್ರೆ ನಾನೇನ್ಮಾಡ್ಲೀ".

"ಅಲ್ರೀ, ಮೂರು ಹೊತ್ತೂ ಪೇಪರ್ ಹಿಡ್ಕೊಂಡು ಹಾಸಿಗೇಲಿ ಬಿದ್ದಿರ್ತೀರಾ, ಅದರಲ್ಲಿ ಮೂರು ದಿನದಿಂದಾ ಆ ಮಹಾನುಭಾವ ಕ್ರಿಟಿಕಲ್ಲೂ, ಕ್ರಿಟಿಕಲ್ಲೂಂತ ಬರೀತಿದ್ರಲ್ಲಾ. ಹೀಗಾಗುತ್ತೆಂತ ನಿಂಗೆ ತೋಚಿಲ್ವೇನ್ರೀ, ಬೇಗ ಹೋಗಿ ದುಡ್ಡು ತರ್ಬಾರ್ದಿತ್ತೇ. ಈಗೇನ್ರೀ ಮಾಡೋದೂ ?"

"ನಂಗೆ ಅದೆಲ್ಲಾ ತೋಚೋದಿಲ್ಲಾ, ಅಗೋ ಅಲ್ನೋಡು ಗೇಟ್ ಶಬ್ದ, ಅವನ ಕೈಲಿ ಸೂಟ್ ಕೇಸ್, ಅವಳ ಕಂಕುಳಲ್ಲಿ ಆ ನಾಯಿ, ಎಲ್ಲಿ ಬಚ್ಚಿಟ್ಟು ಕೊಳ್ಳಲೀ, ತೋಚ್ತಾ ಇಲ್ವಲ್ಲಾ".

ಪ್ರೇಮ ಪತ್ರ

ನಿನ್ನ ಪ್ರಥಮ ಪ್ರೇಮ ಪತ್ರ......
ಒಂದಲ್ಲ, ನೂರು ಬಾರಿ ಓದಿದ್ದೇನೆ...
ಇನ್ನೂ ಓದುತ್ತಲೇ ಇದ್ದೇನೆ
ಅಹಾ ! ಅದೇನು ಬರಹ, ಸಾವಿರ ಬಾರಿ
ಓದಿದರೂ, ಅರ್ಥವಾಗದ, ಬ್ರಹ್ಮ ಲಿಪಿ

ಬಸವರಾಜ್
ಮದ್ರಾಸು

ಯೂನಿವರ್ಸಲ್ ವಿಲೇಜ್

'ಮನು'

ಮಧ್ಯಾಹ್ನ ಹನ್ನೆರಡರ ಆಸುಪಾಸಿನಲ್ಲಿ ನೀವೇನಾದರೂ ಫ್ರಾಂಕ್‌ಫರ್ಟ್ ಏರ್‌ಪೋರ್ಟ್‌ನಲ್ಲಿ ಕುಳಿತಿದ್ದೀರಿ ಅಂತಿಟ್ಟುಕೊಳ್ಳಿ, ಆವಾಗ ನಿಮಗೆ ಅನುಮಾನ ಬರುತ್ತೆ-ನೀವೇನಾದರೂ ಭಾರತದ ಒಂದು ಏರ್‌ಪೋರ್ಟ್‌ನಲ್ಲಿಕುಳಿತಿರಬೇಕು ಅಂತ. ಭಾರತದ ಕಡೆ ಅರ್ಧರ್ಧ ಘಂಟೆಗೆ ಹೊರಡೋದಕ್ಕೆ ಅಂತ ಭೂತಾಕಾರದ ವಿಮಾನ ಗಳು ಆ ವೇಳೆಯಲ್ಲಿ ಸಾಲುಗಟ್ಟಿ ನಿಂತಿರುತ್ತವೆ. ಪ್ರಪಂಚದ ಎಲ್ಲಾ ಕಡೆಯಿಂದ ಬಂದ ವರು ಇಲ್ಲಿ ಇಳಿದು, ಈ ವಿಮಾನಗಳಲ್ಲಿ ಹತ್ತಿ ಹೋಗಬೇಕು.

ನಾನೇ, ನೋಡಿ, ಇಟಲಿಯಿಂದ ಬರ್‍ತಿದ್ದೆ (ರೋಮ್‌ನಿಂದ ನೇರ ಫ್ಲೈಟ್ ಸಿಗಲಿಲ್ಲ ಅಂತ) ನನ್ನ ಪಕ್ಕದಲ್ಲಿದ್ದವರು ಜೀನೀವಾಯಿಂದ ಬರ್‍ತಿದ್ದರು. ನನ್ನ ಎದುರಿಗಿದ್ದ ಸರದಾರಜೀ, ವಿಯನ್ನಾಯಿಂದ ಬರ್‍ತಿದ್ದ. ಆಚೆ ಕಡೆ ಕುಳಿತಿದ್ದವರು ಅಮೇರಿಕಾ ಯಿಂದ ಬರ್‍ತಿದ್ದರು. ಅವರಂತೂ ಪಾಪ ತುಂಬಾ ಸುಸ್ತಾಗಿದ್ದರು.

ನನ್ನ ಪಕ್ಕದಲ್ಲಿ ಕುಳಿತಿದ್ದವರು ಇಬ್ಬರೂ ತಮ್ಮ ತಮ್ಮಲ್ಲೇ ಮಾತಾಡ್ಕೋತಾ ಇದ್ದರು. ನನ್ನ ಕಿವಿ ನೆಟ್ಟಗಾಯಿತು. ಮಾತಾಡೋಕೆ ಬರದೆ ಇದ್ದರೂ, ಅರ್ಥವಾಗೊ ಭಾಷೆ, ಮರಾಠಿ. ನಾನೂ ಮಾತಿನಲ್ಲಿ ಸೇರಿಕೊಳ್ಳೊದಕ್ಕೆ ಪ್ರಯತ್ನವ ಮಾಡಿದೆ.

'ನಮಸ್ಕಾರ'
'ನಮಸ್ಕಾರ'
'ನೀವೆಲ್ಲಿಯವರೆಗೆ ಅಂತ ಕೇಳಬಹುದೆ ?' ಪ್ರಶ್ನೆ ನನ್ನದು.
'ಓಹೋ ಧಾರಾಳವಾಗಿ...ಪುಣೆಗೆ'
'ಹೌದೆ...ನಾನೂ ಪುಣೆಗೆ' ನಾನು ಅಂಬೋಣ,
'ನಿಮ್ಮ ಹೆಸರು ?'
ನಾನು ಹೇಳಿದೆ.
'ನನ್ನ ಹೆಸರು ಸಾವಂತ್' ಆತ ಹೇಳಿಕೊಂಡರು.
'ಪುಣೆಯಲ್ಲಿ ಎಲ್ಲಾಯಿತು ? ನಾನು ಕೇಳಿದೆ.
'ಕೊಥರೂಡ್'
ಅರೆ, ನಾನು ಕೊಥರೂಡ್ ! ನೀವು ಯಾವ ಕಾಲೋನಿ ?
'ನಾನು ಡಹಾಣೂಕರ್ ಕಾಲೋನಿಗೆ. ನೀವು ?'
ಮೈ ಗುಡ್‌ನೆಸ್...ನಾನು ಡಹಣೂಕರ್‌ಗೆ'
ಸಾವಂತರ ಪಕ್ಕದಲ್ಲಿದ್ದ ಗೃಹಸ್ಥ ನಕ್ಕ,
'ನಿಮ್ಮ ರಸ್ತೆ ?'
'ಮೂರು......ನಿಮ್ಮದು ?'
'ಒಂದು'

ಒಂದನೇ ರಸ್ತೆಯ ನಾನು ಮೂರನೇ ರಸ್ತೆಯ ಸಾವಂತರು ಅಕ್ಕಪಕ್ಕದಲ್ಲಿ ಕುಳಿತು ಜರ್ಮನಿಯ ಫ್ರಾಂಕ್‌ಫರ್ಟ ಏರ್‌ಪೋರ್ಟ್‌ನಲ್ಲಿ ಮಾತನಾಡುತ್ತಿದ್ದಾಗ, ಭೇಟಿಯಾಗಲು ನಾವು ಇಷ್ಟು ದೂರ ಬರಬೇಕಾಯಿತೆ ಎಂಬ ಪ್ರಶ್ನೆಯ ಜೊತೆ, ನಾವು ಮಾತನಾಡುವ 'ಯೂನಿವರ್ಸಲ್ ವಿಲೇಜ್' ಎಂಬುದು ಇದೇನೇನೂ ಎಂಬ ಸಂಶಯವೂ ಬಂತು.

ಇಂತಹ ಸಂದರ್ಭಗಳಲ್ಲಿ ಆತ್ಮೀಯತೆ ಹುಟ್ಟುವುದು ಸಹಜ, ನಮ್ಮದೇ ಕಾಲೋನಿಯಲ್ಲಿ ಸಿಕ್ಕಾಗ, ಕತ್ತೆತ್ತಿ ನೋಡದೆ ಹೋಗುವ ಪಾರ್ಟಿಯ ಜೊತೆ, ಈಗ ಗಂಟೆಗಟ್ಟಲೆ ಹರಟೆ ಹೊಡೆಯೋಣ ಅನ್ನಸುತ್ತೆ. ಆತನನ್ನು ಕರೆದುಕೊಂಡು ಹೋಗಿ ರೆಸ್ಟೋರಾಂಟ್‌ನಲ್ಲಿ ಸ್ಯಾಂಡ್‌ವಿಚ್, ಕೊಡಿಸುವ ಧಾರಾಳತನವೂ ಬರುತ್ತೆ! ಪ್ರತಿಯೊಂದಕ್ಕೂ ಡಾಲರ್ ಅಥವಾ ಮಾರ್ಕ್‌ನಲ್ಲಿ ಹಣ ಪೆಕ್ಕಬೇಕಲ್ಲ. ಹಾಗೆ ಕೊಡುವಾಗಲೆಲ್ಲ ಎಕ್ಸ್‌ಚೇಂಜ್ ರೇಟ್‌ನಿಂದ ಗುಣಿಸಿ ಇಷ್ಟು ರೂಪಾಯಿ ಕೈಬಿಡಿತು ಅಂತ ಕೂಗೊ ಮನಸ್ಸನ್ನ ಸಮಾಧಾನ ಪಡಿಸೊ ಧೈರ್ಯ ತೋರಿಸಬೇಕಲ್ಲ ?!

ಇವೆಲ್ಲದರ ಮಧ್ಯೆ ಸಾವಂತ್ ಎಷ್ಟು ಧಾರಾಳಿಯಾದರೆಂದರೆ 'ಮುಂಬೈಯಿಂದ ಪುಣೆಗೆ ಹೋಗೋದಕ್ಕೆ ನೀವು ಯೋಚನೆ ಮಾಡಲೆ ಬೇಡ್ರಿ. ನನಗೆ ಆಫಿಷಿಯಲ್ ಕಾರು ಬರುತ್ತೆ' ಎಂದು ಘೋಷಿಸಿದರು. ನಾನು ಆ ಮಾತಿಗೆ ತಲೆಯಾಡಿಸಿದೆ. ಇವರು ಈ ಮಾತಾಡುವುದಕ್ಕೆ ಮುನ್ನ ನಾನು ಟ್ಯಾಕ್ಸಿಯಲ್ಲಿ ಹೋಗುವುದು ಎಂದು ತೀರ್ಮಾನಿಸಿದ್ದೆ.

ನಾವು ಫ್ಲೈಟ್ ಹತ್ತೋವರಗೂ ಒಟ್ಟಿಗೆ ಓಡಾಡಿದ್ದೂ ಓಡಾಡಿದ್ದೆ. ಡ್ಯೂಟಿ ಫ್ರೀ ಷಾಪಿಂಗ್, ವಿಂಡೊ ಷಾಪಿಂಗ್ (ಏರ್ ಪೋರ್ಟ್ ಒಳಗೆ ದೊಡ್ಡ ಮಾರ್ಕೆಟ್ ಇದೆ) ಎಲ್ಲಾ ಮಾಡಿದ್ದಾಯಿತು.

ವಿಮಾನ ಹತ್ತಿ ಕುಳಿತೆವು. ಸೀಟು ಮಾತ್ರ ಬೇರೆ ಬೇರೆ ಕಡೆ ಇತ್ತು. ಪ್ರಯಾಣ ಒಂಭತ್ತು ಘಂಟೆ ಕಾಲ, ಮಧ್ಯದಲ್ಲಿ ವಿಚಾರಿಸಿಕೊಂಡು ಬಂದೆ. ಆತ ಸಹ ವಿಚಾರಿಸಲು ಬಂದರು.

ಮುಂಬೈನಲ್ಲಿ ಇಳಿದಾಗ ಮಟಮಟ ಮಧ್ಯಾಹ್ನ, ಹೊರಗಡೆ ಬಿಸಿ ಗಾಳಿ ಬೀಸ್ತಿತ್ತು......ಅಥವಾ ಭಾರತದ ಗಾಳಿ ಬೀಸ್ತಿತ್ತು ಅಂತನ್ನೋಣ, ಒಂದು ಬಾರಿ ಇಬ್ಬರೂ ಗಾಳೀನ ದೀರ್ಘವಾಗಿ ಒಳಕ್ಕೆ ಎಳ್ಕೊಂಡವಿ. ಮನಸ್ಸಿಗೆ ಸಮಾಧಾನವಾಯಿತು.

'ಎಲ್ಲಿ ನಿಮ್ಮ ಕಾರು ?' ಏರ್‌ಪೋರ್ಟಿನಿಂದ ಹೊರಗೆ ಬಂದು, ಸಾವಂತರ ಮಾತು ನೆನಪಿಗೆ ಬಂದು ಕೇಳಿದೆ.

'ಹ ಹ್ಹ ಹ್ಹ ನೋಡಿ... ಏನೂ ಅನ್ಕೋಬೇಡಿ...ಕಾರಿನಲ್ಲಿ ಈಗಾಗಲೇ ಇಬ್ಬರಿದ್ದಾರೆ...ನಿಮಗೂ ಕಷ್ಟವಾಗುತ್ತೆ...ಸಾವಂತ್ ಎಳೆಯುತ್ತಾ ಮಾತೆತ್ತಿದರು. ನನ್ನ ಮುಖ ಇಷ್ಟಗಲವಾಯಿತು.

'ಏನು ತೊಂದರೆಯಿಲ್ಲ ಮಿ. ಸಾವಂತ್. ನನಗೆ ಟ್ಯಾಕ್ಸಿ ಇದ್ದೇ ಇದೆ' ಎಂದು ಪ್ರೀಪೇಡ್ ಟ್ಯಾಕ್ಸಿ ಕೌಂಟರ್ ಕಡೆ ನಡೆದೆ.

ನನಗೆ ಸಾವಂತರ ಮಾತು ಕೇಳಿ ಒಟ್ಟು ಸಮಾಧಾನವೇ ಆಗಿತ್ತು. ಫ್ರಾಂಕ್ ಫರ್ಟ್ ಏರ್‌ಪೋರ್ಟ್‌ನಲ್ಲಿ ಕೇಳಿದ್ದ ಮಾತು ನನ್ನನ್ನು ಬಹಳ ಇಕ್ಕಟ್ಟಿಗೆ ಸಿಕ್ಕಿಸಿತ್ತು.

**   **   **   **

ನನ್ನ ಎದುರಿಗಿದ್ದ ಸರದಾರಜೀ ವಿಯೆನ್ನಾದಿಂದ ಬಂದಿದ್ದ.

ಅವನು ತನ್ನ ಕಥೆ ಹೇಳಿದ. ಸುಮಾರು ಮೂವತ್ತು ವರ್ಷಗಳ ಹಿಂದೆ ಅವನು ಭಾರತವನ್ನು ಬಿಟ್ಟು ಬಂದನಂತೆ. ವಿಯೆನ್ನಾದಲ್ಲಿ ನೆಲಸಿ, ಅಲ್ಲಿ ವ್ಯಾಪಾರ ಹುಟ್ಟು ಹಾಕಿದ, ಈಗ ಅಮೋಘವಾಗಿ ಬೆಳೆದಿದ್ದಾನೆ. ಭಾರತದಿಂದ ರೆಡಿಮೇಡ್ ಬಟ್ಟೆ ತರಿಸುತ್ತಾನೆ, 'ಸೊಗಸಾದ ವ್ಯಾಪಾರ' ಎಂದ ಸರದಾರಜೀ.

'ಭಾರತಕ್ಕೆ ವಾಪಸ್ಸು ಬರಬೇಕು ಅನ್ನಿಸಲಿಲ್ಲವೇ ?' ಎಂದು ಕೇಳಿದೆ.

'ಅನೇಕ ಬಾರಿ ಅನ್ನಿಸಿತು. ಆದರೆ ಪಂಜಾಬಿನಲ್ಲಿ ಗಲಭೆ, ಅಶಾಂತಿ ಇದನ್ನೆಲ್ಲ ನೋಡಿ ಮನಸ್ಸು ಹಿಂಜರಿದಿತ್ತು. ಈಗ ಎಲ್ಲ ಸರಿ ಹೋಗಿದೆ. ಈಗ ತೀರ್ಮಾನ ಮಾಡಿಕೊಂಡೆ ವಾಪಸ್ಸು ಜಲಂಧರಕ್ಕೆ ಹೋಗಿ ನೆಲಸುವುದು ಅಂತ...

ಹದಿನೈದು ವರ್ಷದಿಂದ ಭಾರತಕ್ಕೆ ಬಂದಿಲ್ಲ ಆತ. ಎಳೆಯ ಬಾಲಕ ಉತ್ಸಾಹ ತೋರಿಸುವಂತೆ, ಸರದಾರಜೀಯ ಮುಖದ ಮೇಲೆ ಹೊಸ ಉತ್ಸಾಹ, ಮುಗುಳ ನಗೆ, ಕ್ಷಣಕೊಮ್ಮೆ 'ವಿಮಾನ ಲೇಟ್ ಆಯಿತಲ್ಲ' ಎಂದು ಗೊಣಗುತ್ತ ಮೇಲೆದ್ದು ಅಲ್ಲಿಂದ ಇಲ್ಲಿಗೆ ಓಡಾಡುವುದು ನಡೆದಿತ್ತು. ತನ್ನ ಊರು ಜಲಂಧರವನ್ನು ಎಷ್ಟು ಬೇಗ ನೊಡೇನು ಎಂದು ತವಕ ಅವನ ಪ್ರತಿ ಮಾತಿನಲ್ಲಿ, ಕೃತಿಯಲ್ಲಿ ವ್ಯಕ್ತವಾಗುತ್ತಿತ್ತು

'ಇಷ್ಟು ದೊಡ್ಡ ವ್ಯಾಪಾರ ಯೂರೋಪಿನಲ್ಲಿ ಸ್ಥಾಪಿಸಿದ್ದೀರಿ. ನೀವು ಜಲಂಧರಕ್ಕೆ ವಾಪಸ್ಸು ಬರುವ ನಿರ್ಧಾರದಿಂದ ಅದಕ್ಕೆ ಧಕ್ಕೆ ಆಗುವುದಿಲ್ಲವೇ ? ನಾನು ಕೇಳಿದೆ.

'ಸ್ವಾಮಿ, ಇಷ್ಟು ವರ್ಷ ಈ ನೆಲದ ಮೇಲೆ ಬಾಳಿದ್ದರಿಂದ ನನಗೆ ಸತ್ಯ ಚೆನ್ನಾಗಿ ಅರಿವಾಗಿದೆ. ಯಾವತ್ತು ಬಿಳಿಯರು, ನಮ್ಮನ್ನು ತಮ್ಮವರು ಎಂದು ತಿಳಿಯುವುದಿಲ್ಲ. ಯಾವತ್ತಿದ್ದರೂ ನನ್ನ ದೇಶ, ನನ್ನ ಹುಟ್ಟೂರು ನನ್ನ ನೆಲ. ನನ್ನ ಜನ ಇವರೇ ನನಗೆ ಮರ್ಯಾದೆ ಕೊಡುವವರು. ಮರ್ಯಾದೆ ಇಲ್ಲದ ಜೀವನ ಎಂತಹದು ಸ್ವಾಮಿ ? ದುಡ್ಡು ಕಾಸು ಮಾಡುವ ಚಕ್ಕರ್‌ನಲ್ಲಿ ಎಲ್ಲವನ್ನು ಮರೆತು ಹೋದ ಹಾಗಾಗಿತ್ತು......ಜಲಂಧರ್‌ನಲ್ಲಿ ಫ್ಯಾಕ್ಟರಿ ಹಾಕುವುದಕ್ಕೆ ನೆಲ ತೆಗೆದು ಕೊಂಡಿದ್ದಾಯಿತು' ಎಂದು ತನ್ನ ಯೋಜನೆಗಳನ್ನು ಹೇಳ ತೊಡಗಿದ.

ನಮ್ಮ ಸರದಾರಜೀ, ಈ ಯೂನಿವರ್ಸಲ್ ವಿಲೇಜ್‌ನ ತಥ್ಯವನ್ನೆ ತಲೆಕೆಳಗು ಮಾಡಿಬಿಟ್ಟನಲ್ಲ ಎನ್ನಿಸಿತು. ಆದರೆ ನಿಜ ಹೇಳುವುದಾದರೆ, ಅವನು ಹೇಳಿದ್ದಷ್ಟೂ ನನಗೆ ಅಪ್ಯಾಯಮಾನವಾಗಿತ್ತು.

ಮುರಾರಿಯ ಕರ್ಮಕತೆ

ಅ. ರಾ. ಸೇ.

ಇತ್ತೀಚೆಗೆ ಮುಗಿಲು ಹಳ್ಳಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಫೈನಲ್ ಪರೀಕ್ಷೆಯ ಪ್ರಶ್ನ ಪತ್ರಿಕೆಗಳು ಔಟಾದವು. ಕರ್ಣ ಪಿಶಾಚಿಯ ಸಂಪಾದಕ ಗುರ್ರಿಗೆ ಒಂದು ಐಡಿಯ ಬಂತು. ಆ ಪ್ರಶ್ನೆ ಪತ್ರಿಕೆಗಳನ್ನು ಪೂರ್ತಿಯಾಗಿ ಕರ್ಣ ಪಿಶಾಚಿಯಲ್ಲಿ ಅಚ್ಚು ಹಾಕಿಸಿದ. ವಿದ್ಯಾರ್ಥಿಗಳೇಕೆ ನೂರಾರು ರೂಪಾಯಿ ಕೊಟ್ಟು ಅವನ್ನು ಕೊಂಡು ಕೊಳ್ಳಬೇಕು ? ಸ್ವಪ್ನ ಸುಂದರಿ ವಿಶ್ವವಿದ್ಯಾಲಯದಲ್ಲಿ ಬೊಬ್ಬೆ, ಈಗೇನು ಮಾಡಬೇಕು ? ಯಾರ ಕೈವಾಡ? ಏಕಾಯಿತು ನಮಗೀಥರ ಏಕಾಯಿತು ? ಇದರಿಂದ ವಿ.ವಿ.ಗೆ ಎಷ್ಟು ಕಷ್ಟ !

ಸ್ವಪ್ನ ಸುಂದರಿ ಫೌಂಡೇಷನ್ನಿನ ಅಧ್ಯಕ್ಷರು, ಅಕೆಡಮಿಕ್ ಕೌನ್ಸಿಲ್, ಸೆನೆಟ್, ಸಿಂಡಿಕೇಟ್, ಎಲ್ಲರ ಸಭೆಯೂ ಸೇರಿತು.

ಕರ್ಣಪಿಶಾಚಿಯಲ್ಲಿ ಸ್ಥಳೀಯ ವಿದ್ವಾಂಸರ ಪ್ರತಿಕ್ರಿಯೆಗಳು ಕೆಂಡದ ಉಂಡೆಯಂತಿದ್ದವು.

ಒಬ್ಬರು- ಈ ಸ್ಥಿತಿಗೆ ನಮ್ಮ ರಾಷ್ಟ್ರದಲ್ಲಿ ವೈಜ್ಞಾನಿಕ ಮನೋಭಾವ ಕಡಿಮೆಯಿರುವುದೇ ಕಾರಣ.

ಇನ್ನೊಬ್ಬರು-ಪರೀಕ್ಷೆ, ಶೋಷಣೆ, ಇತ್ಯಾದಿ ವಿಷಯಗಳ ಬಗ್ಗೆ ರಾಷ್ಟ್ರ ಈ ಕೂಡಲೇ ಎಚ್ಚರಗೊಳ್ಳಬೇಕು.

ಮತ್ತೊಬ್ಬರು - ಧಿಕ್ಕಾರ, ಧಿಕ್ಕಾರ, ಧಿಕ್ಕಾರ,

ಉನ್ನತ ಮಟ್ಟದ ಸಭೆಯಲ್ಲಿ ಬಿಸಿ ಬಿಸೀ ಚರ್ಚೆ ನಡೆಯಿತು. ರಹಸ್ಯ ಭಂಗ ಮಾಡಿದವರ ಶಿರಚ್ಛೇದನ ಮಾಡಬೇಕೆಂಬ ಕಾನೂನು ಸ್ವಪ್ನ ಸುಂದರಿ ವಿ.ವಿ.ಯಲ್ಲಿದೆಯಂತೆ.

ಮುಖ್ಯವಾದ ಸಲಹೆಯೆಂದರೆ ಹೊಸ ಪ್ರಶ್ನ ಪ್ರತ್ರಿಕೆಗಳನ್ನು ಕೊಡ ಬೇಕೆಂಬುದು, ಬಲುಹೊತ್ತು ಚರ್ಚೆಯಾದ ಮೇಲೆ – ಸೂಕ್ತವಾದ ಉಗ್ರಕ್ರಮ ಕೈಗೊಂಡಿದ್ದೇವೆ ಎಂಬ ಪತ್ರಿಕಾ ಹೇಳಿಕೆ ಬಂತು, ಹಾಗೆಂದರೆ ಏನನ್ನೂ ಮಾಡಿಲ್ಲ ಎಂದೇ ಅರ್ಥ.

ನಮಗೆ ತಿಳಿದ ಪ್ರಕಾರ ಈ ಸಭೆಗೆ ಮುರಾರಿ ಆಮಂತ್ರಿತನಾಗಿದ್ದ. ಹೊಸ ಪ್ರಶ್ನಪತ್ರಿಕೆ ಕೊಡುವ ಸಲಹೆಯನ್ನು ಅವನು ತೀವ್ರವಾಗಿ ವಿರೋಧಿಸಿದ. ಇತ್ತೀಚಿನ ಉದಾರೀಕರಣನೀತಿಯಂತೆ, ಎಂ.ಐ.ಟಿಯು ಪ್ರಶ್ನಪತ್ರಿಕೆಗಳನ್ನು ಬೇರೆ ವಿ.ವಿ.ದವರೇ ಕೊಡುತ್ತಾರೆ, ಅದಕ್ಕೆ ಮಾದರಿ ಉತ್ತರವನ್ನು ಅವರು ಕೊಟ್ಟಿರುತ್ತಾರೆ. ಅದನ್ನು ಜೆರಾಕ್ಸ್ ಮಾಡಿ ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತದೆ ಎಂದು ಕುಹಕಿಗಳು ಹೇಳುತ್ತಾರೆ. ಈಗ ಬೇರೆ ಪ್ರಶ್ನೆಪತ್ರಿಕೆಗೆ ಬೇರೆ ಉತ್ತರ ಬರುವ ತನಕ ಕಾದು ಅದನ್ನು ಜೆರಾಕ್ಸ್ ಮಾಡಿಸಿ, ಉತ್ತರ ಬರೆಯುವವರು ಇಲ್ಲಿ ಇಲ್ಲ...............ಅದೆಲ್ಲಾ ಆಗದ ಹೋಗದ ಲೆಕ್ಕಾಚಾರ. ಏನಾಯಿತು. ಪೇಪರ್ ಔಟಾದರೆ? ಮುರಾರಿ ವಿ.ವಿ. ಯಲ್ಲಿ ಇಷ್ಟು ಪ್ರಭಾವಶಾಲಿ. ಅವನ ಒಂದು ಚಿಕ್ಕ ಕತೆ ಇಲ್ಲಿದೆ. ದುಬ್ಬೀರ್ಗ, ರಾಜೀನಾಮೆ ಕೊಟ್ಟು ಹೋದ ಮೇಲೆ ಮುಗಿಲು ಹಳ್ಳಿ ಅಥೇನಿಯಂಗೆ ಬಂದ ಅಧ್ಯಕ್ಷನೇ ಮುರಾರಿ, ಮುಗಿಲು ಹಳ್ಳಿಯ ಅತ್ಯುನ್ನತ ಸಾಹಿತ್ಯ ಸಂಸ್ಥೆ ಅಥೇನಿಯಂ, ಅದು ಪ್ರತಿವರ್ಷ ಕೊಡುವ 'ಲಾರೆಲ್' ಪ್ರಶಸ್ತಿಯನ್ನು ಲೋಕಲ್ ಆಗಿ ನೋಬಲ್ ಪ್ರಶಸ್ತಿಯಷ್ಟೇ ಪ್ರಮುಖವೆಂದು ಭಾವಿಸಲಾಗಿದೆ. 1980 ರಿಂದ ಈ ಪ್ರಶಸ್ತಿ ಯಾರಿಗೂ ದೊರಕಿಲ್ಲ, ಅದಕ್ಕೆ ಕಾರಣಗಳು ಅನೇಕ, ಅವು ನಿಮಗೂ ಗೊತ್ತಿವೆ, ಸುಮ್ಮನೆ ಏಕೆ ಬೆದಕ ಬೇಕು ? ಹದಿನೈದು ವರ್ಷಗಳ ಪ್ರಶಸ್ತಿ ಮೊತ್ತ ಒಂದೂವರೆ ಲಕ್ಷ ರೂಪಾಯಿಗಳ ನಗದು ಪುರಸ್ಕಾರ. ಬಂಗಾರದ ಮೆಣಸಿನಕಾಯಿ ಮತ್ತು ಪ್ರಶಸ್ತಿ ಪತ್ರ ಈ ವರ್ಷದ ಕೊನೆಯಲ್ಲಿ ಮುರಾರಿಗೆ ಸಿಗುತ್ತದೆ. ಮುರಾರಿ ಮಾಡಿರುವ ಸಾಹಿತ್ಯ ಸೇವೆಯೇನು ಎಂದು ಕೇಳ ಬೇಡಿ. ಅವನಿಗೆ ಪ್ರಶಸ್ತಿ ಬಂದಿರುವಾಗ ಸಂತೋಷಿಸದೆ ಹೊಟ್ಟೆ ಕಿಚ್ಚಿನ ಮೊಟ್ಟೆ ಕೋಳಿ ಎನ್ನಿಸಿ ಕೊಳ್ಳ ಬೇಡಿ.

ಭಲೆ, ಜಾಂಗು, ಹೊಸಾನಾ ಎಂದು ಗಂಟಲು ಬಿರಿಯುವವರೆಗೆ ಕಿರುಚಿರಿ, ವಾರೆ ಮೇರೆ ಷೇರ್, ವ್ಹಾರೆ ಆಸ್ಮಾನ್ ಗಾಂವ್ ಕಾ ಕುವ್ವಾ ಎನ್ನಿ. 1954ರ ವೇಳೆಗೇ ಅವನೊಂದು ಹೇಳಿಕೆ ಕೊಟ್ಟ, ಅದೆಂದರೆ "ಗಾಂಧೀಜೀ ವಿಚಾರಧಾರೆ ನಮಗೆ ಇಂದೂ ಪ್ರಸ್ತುತ" ಅರವತ್ತರ ದಶಕದ ಆರಂಭದ ವೇಳೆಗೇ ಅವನು ಸಮಾಜವಾದೀ ಚಳುವಳಿಯ ಸೆಕೆಂಡ್ ಹೀರೋ ತರಹ ಒಂದು ಕರಿಷ್ಮ ಬೆಳೆಸಿ ಕೊಂಡ.

'ಎಲ್ಲ ಕಡೆಯಿಂದಲೂ ಉತ್ತಮ ಭಾವನೆಗಳು ನಮ್ಮೆಡೆಗೆ ಬರಲಿ' ಎಂಬ ವೈದಿಕ ಹೇಳಿಕೆಯನ್ನು 'ಎಲ್ಲ ಭಾಷೆಗಳ ಅಪ್ರಸಿದ್ಧ ಕತೆ ಕಾದಂಬರಿಗಳು ನಮಗೆ ರೂಪಾಂತರಕ್ಕೆ ಸಿಕ್ಕಲಿ' ಎಂದು ಬದಲಾಯಿಸಿ, ಅನೇಕ ತರಲೆ ಕೃತಿಗಳನ್ನು ಸೃಷ್ಟಿಸಿದ, ಯಾವುದೇ ಒಂದು ಮಾದರಿಯ ಬರಹಕ್ಕೂ ಹಿಂಬಾಲಕರು ಹುಟ್ಟಿಯೇ ಹುಟ್ಟುತ್ತಾರ ಎನ್ನುವುದನ್ನು ಅವನು ಬಲು ಚೆನ್ನಾಗಿ ಬಲ್ಲ, ಏನಿದ್ದರೂ ನ್ಯಾಷನಲ್ ಲೆವೆಲ್ಲಿ

ನಲ್ಲೇ ನಡೆದರೆ ಉತ್ತಮ ಅಂತ ಅವನು ಇಂಗ್ಲೀಷಿನಲ್ಲೇ ಮಾತನಾಡುತ್ತ, ರಾಷ್ಟ್ರೀಯ ಮಟ್ಟದ ಜನರೊಡನೆ ವಿಹರಿಸುತಿತ್ತಾ ರಾಷ್ಟ್ರೀಯ ಸ್ತರದಲ್ಲೇ ಸ್ಥಾಪಿತ ನಾದ. ಆದರೂ ಅವನಿಗೆ ರಾಷ್ಟ್ರೀಯತೆ ಸಾಕಷ್ಟು ಪ್ರಚಾರವನ್ನಾಗಲೀ ಹಣವನ್ನಾಗಲೀ ಕೊಡಲಿಲ್ಲ, ಸಮಾಜವಾದ, ವಿಚಾರವಾದ ಅಂತ ಬೊಬ್ಬೆ ಹೊಡೆಯುವುದನ್ನು ಬಿಟ್ಟರೆ ಉಳಿದದ್ದು ಕಲ್ಚರ್ ಒಂದೇ. ಒಂದು ದಿನ ಸ್ವಪ್ನ ಸುಂದರಿ ಫೌಂಡೇಷನ್ನಿನ ಅಧ್ಯಕ್ಷರು ನನ್ನನ್ನು ಕೇಳಿದರು.

"ಕಲ್ಚರ್ ಅಂದ್ರೆ ಏನಲೇರಾಯ ?"

"ಅಣಾ, ಕಲ್ಚರ್ ವಜ್ರಗಳು ಅಂತ ಜಾಹಿರಾತು ಕೊಟ್ಟಿರ್ತರಲ್ಲ ಅವರನ್ನೇ ಕೇಳ್ಬೇಕು" ಎಂದೆ.

"ಕೇಳ್ಕೊಂಡಾರ ಬರ್‍ರೋಬೇಗಲೇ, ಈ ಮುರಾರಿ ಅಂಬನು ಹಗಲೆಲ್ಲ ಕಲ್ಚರ್ ಅಂತ ಬಡ್ಕಂತನೆ" ಮುರಾರಿ ತನ್ನ ವಿವಾದಸ್ಪದ (ಎಂದರೆ ತನಗೇ ತಳ ಬುಡ ಗೊತ್ತಿಲ್ಲದ) ಹೇಳಿಕೆಗಳನ್ನು ಕೊಡುತ್ತಲೇ ಇರುತ್ತಾನೆ. ಈಚೆಗೆ ಮುರಾರಿ ತಟಮಠದ ಶ್ರೀ ಶ್ರೀಗಳವರ ಜೊತೆ ಫೋಟೋ ತೆಗೆಸಿ ಕೊಂಡು ಕಲ್ಚರನ್ನು ಹೈಬ್ರಿಡೈಸ್ ಮಾಡ ಬೇಕು ಎಂದು ಹೇಳಿಕೆ ಕೊಟ್ಟ.

ಕರ್ಣ ಪಿಶಾಚಿಯ ಗುರ್‍ಸಿ ಮುರಾರಿಯ ಸಂದರ್ಶನವೊಂದನ್ನು ಛಾಪು ಮಾಡಿದ.

ಗುರ್‍ಸಿ– ಸೊಲ್ಪ ಎಡವಟ್ಟಾತು, ಕಲ್ಚರ್ ಅಂದ್ರೇನು ?

ಮುರಾರಿ– ಅಲೆ ನಿನ್ನಾಪ್ನ, ಅಷ್ಟು ಗೊತ್ತಿಲ್ಲೇನೋ ? ನಾಟ್ಗ, ಫ್ಯಾನ್ಸಿ ಡ್ರೆಸ್ಸು, ತೊಗಲುಗೊಂಬೆ ಅವನ್ನೇ ಕಲ್ಚರ್ ಅನ್ನದು.

ಗುರ್‍ಸಿ– ನೀವು ತಟಮಠದ ಸ್ವಾಮಿ ಜೊತೆಗೆ ಯಾಕೆ ಫೋಟೋ ತೆಗಿಸ್ಗೆಂಡಿ?

ಮುರಾರಿ–ಗುರ್‍ಸೀ, ನಿಂಗೆ ಅದೇಲ್ಲಾ ಅರ್ಥ ಆಗಲ್ಲ.

ಗುರ್‍ಸಿ–ಅದಕ್ಕೇ ನಾನು ಕೇಳಿದ್ದು.

ಮುರಾರಿ– ಗುರ್‍ಸಿ, ನೀನು ನನ್ನ ಸರ್‍ಯಾಗಿ ಅರ್ಥ ಮಾಡ್ಕೆಂಡಿಲ್ಲ. ಇಗಾ

ನೋಡು ಮೊನ್ನೆ ಇಸ್ರೊ ಒಂದು ರಾಕೆಟ್ ಹಾರಿಸ್ತು, ಅದಕ್ಕೂ ಈ ಕಲ್ಚರ್ ಪ್ರೈಬ್ರಿ ಡೈಸ್ ಮಾಡಕ್ಕೂ ಫಾಳ ಕ್ಲೋಸ್ ಸಂಬಂಧ ಅದೆ. ಅರ್ಥ ಮಾಡ್ಕೊಂಬಲ್ಲ ನೀನು.

ಗುರ್ರಿ– ಏನ್ನೈತಲೇ ಅರ್ಥ ಮಾಡ್ಕೊಂಬಕ್ಕೆ ? ಅವತ್ತು ಪಂಪ, ರನ್ನ ಅವ ರೆಲ್ಲಾ ರಾಜಾಶ್ರಯದಗೆ ಇದ್ರು, ಅವರ್ದೆಂಥ ಸಾಹಿತ್ಯ ಅಂತಿದ್ದೆ, ಇವತ್ತು ಯಾವ್ದಾ ಫ್ನೋ ಎಮ್ಮೆಲ್ಯೆ, ಎಂಪಿ ಕರ್ಸಿ ನಿನ್ನ ಪುಸ್ತ್ಗ ಬಿಡಸ್ತಿ, ನೀನು ಏನು ಅಂಬದು ನಂಗೆ ಮೊದಲಿಂದ ಗೊತ್ತು.

ಅದೇನಾದರೂ ಇರಲಿ, ನನಗೆ ಮುರಾರಿಯ ದೋಸ್ತಿ ಬೆಳೆದ ವಿಷಯ ತಿಳಿಸ ಬೇಕು ಮೊದಲು.

ಮುಗಿಲು ಹಳ್ಳಿ ಎಂದರೆ ಸೇಂಗಾ, ಹತ್ತಿ, ಮಾರ್ಜಿನ್, ಅನಾಮತ್, ಸೆಕೆಂಡ್ ಅಕೌಂಟ್ ಇವಕ್ಕೇ ಪ್ರಸಿದ್ಧವಲ್ಲ. ಜೀವನ ವಿಮುಖವಾದ ಅಧ್ಯಾತ್ಮ, ಕತ್ತು ಹಿಸು ಕುವ ಪುರೋಹಿತ ಶಾಹಿಗಳ ವಿರುದ್ಧ ಹೋರಾಡಿ ರೊಕ್ಕವೊಂದನ್ನುಳಿದು ಜೀವನದ ಎಲ್ಲ ಮೌಲ್ಯಗಳ ವಿರುದ್ಧ ಕ್ರಿಸ್ತ ಪೂರ್ವದಲ್ಲೇ ಬಂಡಾಯವೆದ್ದ ಊರು ಮುಗಿಲು ಹಳ್ಳಿ. ನಮ್ಮ ಕಲ್ಗ ಹೇಳುವುದನ್ನು ಕೇಳಿ "ಎಲೇ ರಾಯರೇ, ರೊಕ್ಕಿದ್ರೆ ಅದೇನೋ ಹೆಗಲ ಮ್ಯಾಲಂತ ಕಣೋ" ನಲ್ಲಿ, ಗಲ್ಲಿ ಕವಿಯಾಗಿ ಪ್ರಸಿದ್ಧಿ ಪಡೆದಿದ್ದ ನನ್ನನ್ನು ಅವನು ಮೊದಲು ಕಂಡದ್ದು ಬಕ್ಕಪ್ಪನ ಜಾತ್ರೆ ದಿನ ನಂದೆಣ್ಣನ ಮೆಣಸಿನಕಾಯಿ ಅಂಗಡಿ ಮುಂದೆ.

ಅದೊಂದು ಸಂಕ್ರಾಂತಿಗಳಿಗೆ. ಆವನು ನನಗೆ ದೋಸೆ ಕೊಡಿಸಿದ, ಕಾಫಿ ಕುಡಿ ಸಿದ, ಸಿಗರೇಟು ಸೇದಿಸಿದ, ಸಿನಿಮ ತೋರಿಸಿದ, ಸಾಹಿತ್ಯ ಚರ್ಚಿಸಿದ, ಊಟಕ್ಕೆ ಹಾಕಿಸಿದ. ಹೆಚ್ಚೇನು ನಾವು ಹಕ್ಕ-ಬುಕ್ಕರಂತೆ close ಆದೆವು, ಈ ದಿಢೀರ್ ಮೈತ್ರಿ ಬಹಳ ದಿನ ಉಳಿಯಲಿಲ್ಲ, ರಮ್ಯತೆ ಸಾಯಿತು ಎಂದನವ. ಹೌದು ನನಗೆ ಗೊತ್ತು ಎಂದೆ. ಆಧುನಿಕತೆ ಈಗ in-thing ಎಂದ. ಹೌದು ಆದರೆ ಅದು ಈಗಾಗಲೇ still born ಎಂಬ ಗುಮಾನಿ ನನಗೆ ಎಂದೆ. ನೀನು ಪ್ರತಿಗಾಮಿ ಎಂದ ನನ್ನನ್ನು ಪ್ರಗತಿಯತ್ತ ಕರೆದೊಯ್ ಎಂದೆ. ನನ್ನ ಅವನ ಭಿನ್ನಾಭಿಪ್ರಾಯ ಬಹು ಬೇಗ ಮೂಡಿತು. ಅದು ಬಾಟಲಿಯ ವಿಷಯ. ಅದಿಲ್ಲದೆ ಎಂಥ ಸಾಹಿತ್ಯ, ಎಂಥ ಕಲ್ಚರ್ ಎಂದ ಅವನು. ಅದಿದ್ದಮೇಲೆ ಸಾಹಿತ್ಯ, ಕಲ್ಚರ್ ಯಾರಿಗೆ ಎಂದೆ ನಾನು, ಇಬ್ಬರೂ agreed to disagree, ಅವನು ಮಾಂಟೆಕಾರ್ಲೋ ವಿಶ್ವವಿದ್ಯಾಲಯಕ್ಕೆ ಓದಲು ಹೋದಂದು, ನಾನವನಿಗೆ ಖಾದಿ ದಾರದ ಹಾರ ಹಾಕಿ ಕಳಿಸಿದೆ. ಅವನು ಬಲಿತು ಬಂದ, ನಾನಿನ್ನೂ ಎಳೇ ಬೆಂಡೇಕಾಯೇ !

ಇದೀಗ ಅವನಿಗೆ ಅಥೇನಿಯಂ ಲಾರೆಲ್ ಪ್ರಶಸ್ತಿಯೊಂದೇ ಅಲ್ಲ. ಸ್ವಪ್ನ ಸುಂದರಿ ಫೌಂಡೇಷನ್ನಿನ ಉಪಾಧ್ಯಕ್ಷ ಪದವಿಯೂ ಸಿಗಲಿದೆ And ನಾನು ಈಗ ಏನು ? ಪೂರ್ ಓಲ್ಡ್‌ಮಿ.

ಆಡು ಮುಟ್ಟದ ಸೊಪ್ಪಿಲ್ಲ. ಮುರಾರಿ ಹೇಳಿಕೆಗಳನ್ನು ಕೊಡದ ವಿಷಯವೇ ಇಲ್ಲ. ಅವನು 'ನಿರ್ಭೀತರಾಗಿ ಇದ್ದುದನ್ನು ಇದ್ದಂತೆಯೇ ಬರೆಯಿರಿ' ಎಂದು ಮುಗಿಲು ಹಳ್ಳಿ ಪತ್ರಕರ್ತರಿಗೆ ಕರೆ ಕೊಟ್ಟ, ಸಭೆ ಮುಗಿಸಿ ಕೊಂಡು ಬಂದ ಕರ್ಣ ಪಿಶಾಚಿ ಗುರ್ಕಿ "ರಾಯರೇ, ಅಥೆಂಗೆ ಆಕ್ಕತಲೇ ಇದ್ದದ್ದನ್ನ ಇದ್ಧಂಗೆ ಬರೆಯುಕ್ಕೆ ಮುರಾರಿ 'ಬೆರ್ಕಿ' ಅಂತ ಬರೆಯುಕ್ಕೆ ಆಕ್ಕತೇನೋ ?" ಎಂದಿದ್ದ.

ಅದು ಏನೇ ಇರಲಿ ; ಶುಕ್ರನೊಬ್ಬನನ್ನು ಬಿಟ್ಟು ಉಳಿದೆಲ್ಲಾ ನವಗ್ರಹಗಳೂ ಏಕಾದಶ ಸ್ಥಾನದಲ್ಲಿರುವಂತಹ ಶುಭ ಫಲಗಳನ್ನು ಕೊಡುತ್ತಿರಲು ಮುರಾರಿ ಮಜದ ಮೇರು ಶಿಖರವನ್ನೇರಿ ಕುಳಿತ,

ಹೀಗಿರುವುದು ಸಾಧ್ಯವೇ ? ಶ್ರೀರಾಮಚಂದ್ರ, ಧರ್ಮಜ, ನಳ ಮೊದಲಾದ ವರನ್ನೇ ಕಾಡು ಸೇರಿಸಿದ ವಿಧಿ, ಈ ತುಕಾಲಿ ಮುರಾರಿಯನ್ನು ಪುಗಸಟ್ಟೆ ಕೈ ಬಿಟ್ಟಿತೇ:

ಮುರಾರಿಯಿಂದ ಉದ್ಧಾರವಾದ. ಸಮಾಜವಾದ, ವೈಜ್ಞಾನಿಕ ಮನೋಭಾವ. ಕಲ್ಚರಲ್ ಹೈಬ್ರಿಡೈಸೇಷನ್ ಸದ್ಭಾವನೆ, ವಿಚಾರವಾದ, ಸಾಹಿತ್ಯಗಳು ಕೃತಘ್ನತೆ ತೋರಲಿಲ್ಲ. ಮುಗಿಲು ಹಳ್ಳಿಯಿಂದ ಎಂಟು ಕಿ. ಮೀ. ದೂರದಲ್ಲಿ ದ್ಯಾಪನಳ್ಳಿ ರಸ್ತೆಯ ಪಕ್ಕದಲ್ಲಿ ಅವನಿಗೊಂದು ಎಸ್ಟೇಟ್ ಕೊಡಿಸಿದವು. ಅದರಲ್ಲಿ ಒಂದು ಭವನ ನಿರ್ಮಾಣ ಮಾಡಿಸಿ ಕೊಟ್ಟವು ಅದಕ್ಕೆ 'ಎಬಡೆನ್ಸ್‌ವಿಲ್ಲ' ಎಂದು ನಾಮ-ಕರಣ ವಾಯಿತು.

ಇದೇ ಮುರಾರಿಯ ಕ್ಲೇಶಕ್ಕೆ ಕಾರಣವಾಯಿತು. ಅಲ್ಲಿ ಒಂದು ಕ್ಷುದ್ರ ಗ್ರಹ ಸೇರಿ ಕೊಂಡಿತು. ಸೆಲ್ಲರ್‌ನಲ್ಲಿದ್ದ ಬಾಟಲಿಗಳೇ ಮಾಯ, ಕಾದಂಬರಿ ಕವನಗಳನ್ನು ರಚಿಸಿ ಇಟ್ಟಿದ್ದರೆ ಹಸ್ತಪ್ರತಿಗಳೇ ಮಾಯ. ಒಂದು ದಿನ ಮಂಚದ ಮೇಲೆ ಮಲಗಿದ್ದ ಮುರಾರಿಯೇ ದ್ಯಾಪನಳ್ಳಿ ರಸ್ತೆ ಪಕ್ಕದ ಗುಂಡಿಯಲ್ಲಿ ಬಿದ್ದಿದ್ದ, ಅವನ ಕನಸಿನಲ್ಲಿ ಹುಲಿ, ಹಾವು, ಫೇಂಡಾಮೃಗಗಳು, ಮುರಾರಿಯ ಯಜಮಾನಿತಿಯ ಫಜೀತಿ ಹೇಳು ವಂತಿಲ್ಲ.

'ಎಬಿಡೆನ್ಸ್ ವಿಲ್ಲಾ' ದಲ್ಲಿ ನಡೆಯುತ್ತಿರುವ ಈ ಗಡಿಬಿಡಿಗಳ ಪರೀಕ್ಷೆಯನ್ನು (1) ಪೋಲಿಸರು (2) ಮುಗಿಲು ಹಳ್ಳಿಯ ವಿಜ್ಞಾನಿಗಳು (3) ಪತ್ರ ಕರ್ತರು (4) ಜನಸಾಮಾನ್ಯರು ವೀಕ್ಷಿಸಿ ದಿಗ್ಭ್ರಮಿತರಾದರು. ಜಗತ್ತಿನ ಆಶಾಕಿರಣವಾದ ಮುರಾರಿಯ ಮನೆಯಲ್ಲಿ ಈ ಇಪ್ಪತ್ತನೆ ಶತಮಾನದ ಅಂತ್ಯದಲ್ಲಿ ಹೀಗಾಗುವುದೆಂದು ರೇನು ? ಎಲ್ಲರೂ ದಾಕ್ಷಿಣ್ಯ ಲೋಭೋಪಹತ ಸ್ವಭಾವರಾಗಿ ಸುಮ್ಮನಿದ್ದರು.

ಒಂದಾನೊಂದು ದಿನ ಇದೇನನ್ನೂ ತಿಳಿಯದ ನಾನು ಚಿರತೆ ವೀರನ ಕೋಟೆಯಲ್ಲಿ ಹೋಗುತ್ತಿರುವಾಗ ಆಕಸ್ಮಿಕವಾಗಿ ಒಂದು ಫಲಕ ಕಾಣಿಸಿತು.

ಮಂತ್ರವಾದಿ ಮಾರಿಯಪ್ಪನ್

ಎಲ್ಲಾ ದೆವ್ವ, ಪೀಡೆ, ಪಿಶಾಚಿ ಮೂರನೆಯ ಸಾಲು ಕಾಣಿಸಲಿಲ್ಲ. ಯಾರೋ ಸೆಗಣಿ ಹೊಡೆದಿದ್ದರು. ಎಲ್ಲ ವಿಧದ ದೆವ್ವ, ಪೀಡೆ, ಪಿಶಾಚಿಗಳನ್ನು ಇಲ್ಲಿಯೇ ನೋಡಬಹುದೆಂಬ ಕುತೂಹಲದಿಂದ ಒಳ ನುಗ್ಗಿದೆ. ಅಹೋ ಅತ್ಯದ್ಭುತ, ಗಡ್ಡ ಮೀಸೆಗಳನ್ನು ಭಯಂಕರವಾಗಿ ಕೆದರಿ ಕೊಂಡು ಹಣೆಗೆ ಕುಂಕುಮ ಬಳಿದು ಕೊಂಡು ಹಾಳ. ಗೋಡೆ ಮಾರ, ಒಂದು ಪೀಠದಲ್ಲಿ ಕುಳಿತಿದ್ದಾನೆ. ಅವನೆದುರು ಹರುಕು ಕಂಬಳಿಯ ಮೇಲೆ, ಕಲ್ಚರ್ ಉದ್ಧಾರಕ, ಸದ್ಭಾವನಾ ಪ್ರವಾದಿ ಮುರಾರಿ ಕುಳಿತಿದ್ದಾನೆ. ಚರ್ಚೆ ನಡೆಯುತ್ತಿದೆ.

ಮುರಾರಿ– ನೀವು ದೆವ್ವದ ಉಚ್ಚಾಟನೆ ಮಾಡಿದಿರಿ, ಅದು ಹೋಗಿಲ್ಲ.

ಮಾರ– ನನ್ನ ಫೀಸ್ ಪೂರ್ತಿ ಬಂದಿಲ್ಲ.

ಮುರಾರಿ– ಇದು ಮೋಸ.

ಮಾರ– ಹೌದು ಇನ್ನೂ ಎರಡು ಸಾವಿರ ಕೊಟ್ಟಿಲ್ಲ.

ಮುರಾರಿ– ದೆವ್ವ ಹೋಗಿಲ್ಲ,

ಮಾರ– ಬಾಕಿ ಬಂದಿಲ್ಲ,

ಮುರಾರಿ– ನೀವು ಮೋಸಗಾರರು,

ಮಾರ– ನೀವೇ ಸತ್ಯವಂತರು, ದೆವ್ವ ಗಿವ್ವ ಯಾತರ್ದ್ದೂ ಇಲ್ಲ ಅಂತ ಮೊನ್ನೆ ತಾನೇ, ಮೆಟ್ಟು ಪಾಳಯಂ ನಲ್ಲಿ ಭಾಷಣ ಮಾಡಿದ್ದಿರಿ ತಾನೇ ಇಲ್ಲದ್ದನ್ನು ಯಾಕೆ ಓಡಿಸ ಬೇಕು,

ಮುರಾರಿ– ನಾನು ಯಾರು ಗೊತ್ತೋ ?

ಮಾರ– ನೀವು ಲೋಕ ಪ್ರಸಿದ್ಧರು, ಪ್ರಸಿದ್ಧಿಯಿಂದಲೇ ದೆವ್ವ ಓಡಿಸಬೇಕಾಗಿತ್ತು, ಇಲ್ಲಿಗೆ ಯಾಕೆ ಬಂದಿರಿ ?

ನನಗೆ ಪರಮಾನಂದವಾಯಿತು. ಏಕೆಂದರೆ ಮುರಾರಿ ಇತ್ತೀಚೆಗೆ ಎಲ್ಲೂ ಕಾಣಿಸಿರಲಿಲ್ಲ. ತೆರೆಮರೆಯ ವಿದ್ಯಮಾನ ಅಜ್ಞನಾದ ನನಗೆ ಹೇಗೆ ತಿಳಿಯ ಬೇಕು. ಅವನನ್ನು ಮತ್ತೆ ಮತ್ತೆ ಕಂಡು ಬರುತ್ತಿದ್ದ ಗುರ್ಸ್ವಿ 'ರಾಯರೇ. ಮುರಾರಿಗೆ ಎಲ್ಲೋ ಕ್ಯಾನ್ಸರ್ರೋ, ಏಡ್ಸೋ ಬಂದಿರ್ಬ್ಬೇಕು, ಎಷ್ಟು ಸತಿ ಹೋದ್ರೂ ಸಿಕ್ಕಿಲ್ಲ' ಎಂದಿದ್ದ.

ಇದೀಗ ಮುರಾರಿ ಕ್ಷೇಮವಾಗಿ, ಯಾವ ರೋಗವೂ ಇಲ್ಲದೆ ಇರುವುದನ್ನು ಕಂಡು ಹರ್ಷವಾಯಿತು. ಎಷ್ಟೇ ಆಗಲಿ ಮೆಣಸಿನಕಾಯಿ ಋಣ ಹೇಗೆ ಮರೆಯಲಿ ಮಾರನಿಗೆ ಛೀ ಮಾರಿ ಹಾಕಿ ಮುರಾರಿಯನ್ನು ಕರೆತಂದೆ.

'ನೋಡೋ ಮುರಾರಿ. ನೀನು ನಂಬಿದರೆ ನಂಬು ಬಿಟ್ಟರೆ ಬಿಡು. ಇದು ಅಥರ್ವಣ ಪ್ರಯೋಗದಿಂದ ಮಾತ್ರ ಹೋಗಲು ಸಾಧ್ಯ. ಮಂತ್ರವಾದಿಗಳಿಗೆ ಇದು ಬಗ್ಗುವುದಿಲ್ಲ. ತಟಮಠದ ಸ್ವಾಮಿಗಳ ಹತ್ತಿರ ಹೋಗೋಣ ಬಾ ಎಂದೆ. ಹೋದೆವು. ಸ್ವಾಮಿಗಳ ಕರುಣಿಸಿದರು. ಅಥರ್ವಣಿಕರನ್ನು ಕರೆಸಿದರು. ಉಚ್ಚಾಟನಾ ಹೋಮಕ್ಕೆ ಆಗುವ ಖರ್ಚು, ಸಾಮಗ್ರಿಗಳ ಲಿಸ್ಟ್ ಬರೆಸಿದರು. ಕೊನೆಗೊಂದು ಡಿಚ್ ಉದ್ಭವಿಸಿತು. ಮುರಾರಿ ಸರ್ವ ಧರ್ಮ ಸಮಭಾವದವನು, ಹೋಮಕ್ಕೆ ಕರ್ತೃವಾಗಲು ಲವನಿಗೆ ಅಧಿಕಾರವಿಲ್ಲ. ಮನುಜ ಕುಲವೊಂದೇ ರೈಟ್, ಆದರೆ ಕರ್ತೃವಾಗಲು ಕೆಲವರಿಗೆ ಅಧಿಕಾರ ಕೆಲವರಿಗೆ ಇಲ್ಲ. ಮುರಾರಿ ಹೋಗಿ ಅವನ ಚಿಕ್ಕಪ್ಪನ ಕಾಲು ಹಿಡಿದು ಕರೆದು ಕೊಂಡು ಬಂದ, ಹೋಮ ಯಶಸ್ವಿಯಾಗಿ ನಡೆಯಿತು, ದೆವ್ವನ ಕಾಟ ತಪ್ಪಿತು. ಆಚಾರ್ಯರಿಗೆ ಸಂಭಾವನೆ ಮಾತಾಡಿದಷ್ಟು ಕೊಡಲಿಲ್ಲ.

ಇದರಿಂದಾಗಿಯೇ ಮುರಾರಿಯು ತಟಮಠದ ಸ್ವಾಮಿಗಳ ಜೊತೆ ಫೋಟೋ ತೆಗೆಸಿ ಕೊಳ್ಳ ಬೇಕಾಯಿತು.

(ಈ ಕತೆಯ ಎಲ್ಲಾ ಪಾತ್ರಗಳು ಪ್ಯೂರ್ಲೀ ಪಿಕ್ಚಸಸ್)

ಹಾದಿಯಲ್ಲಿ ಕೇಳಿಸಿದ್ದು :

'ಜನ ಸೇವೆಯೇ ಜನಾರ್ದನ ಸೇವೆ' ಅನ್ನೋ ಮಾತ್ನ ನಂಬ್ಕೊಂಡು ಸಾಕಷ್ಟು ನಂ ಜನಕ್ಕೆ ಸಹಾಯ ಮಾಡ್ತಾನೇ ಬಂದಿದೀನಲ್ರೀ !"

ಕಚಿಕ್ನಾಟಿ ಚಿರಾಯುವಾಗಲಿ

ಬಿ. ಎಸ್. ಪ್ರಭಾಕರ್

"**ಸಾ**ರ್......ಇಂಟಲಿಜೆನ್ಸ್ ಡಿಪಾರ್ಟಮೆಂಟ್ನ ಚೀಫು ನಿಂಹತ್ರ ಅರ್ಜೆಂಟಾಗಿ ಮಾತಾಡ್ಬೇಕಂತೆ. ಕನೆಕ್ಟ್ ಮಾಡ್ಲಾ ಸಾರ್ ?" ಅಪ್ಪಣೆ ಕೇಳಿದ ಆತ.

ಯಾವುದೋ ಗಂಭೀರ ವಿಷಯದ ಮೇಲೆ ಚರ್ಚೆ ಮಾಡುತ್ತಿದ್ದ ಮಿನಿಸ್ಟರ್ ಸಾಹೇಬ್ರು, ಸಿಟ್ಟಿನಿಂದ "ಏನಂತ್ರೀ ಅವ್ರ ಗೋಳು ? ಈಗ ನಾನು ತುಂಬಾ ಬಿಜಿ ಯಾಗಿದ್ದೀನಿ. ಆಮೇಲೆ ರಿಂಗ್ ಮಾಡು ಅಂತ ಹೇಳ್ರೀ" ಅಂತ ಸೂಚನೆ ಕೊಟ್ಟರು ಆತಂಗೆ.

"ಸಾರ್ ಟಾಪ್ ಸೀಕ್ರೆಟ್ ಅಂತೆ. ಇಡೀ ದೇಶಕ್ಕೇ ವಿಪತ್ತು ಬರೋ ಹಾಗಿದ್ಯಂತೆ ಸಾರ್" ಒಂದೇ ಉಸಿರಿಗೆ ಏದುತ್ತಾ ಹೇಳಿದ ಆತ.

"ಮೈಗಾಡ್ ! ಹಾಗಿದ್ರೆ ಇಮಿಡಿಯಟ್ಟಾಗಿ ಕನೆಕ್ಟ್ ಮಾಡಿ" ಅಂತ ಆಜ್ಞೆ ಇತ್ತರು ಮಿನಿಸ್ಟರ್ ಸಾಹೇಬ್ರು.

ಆತ ಕನೆಕ್ಷನ್ ಕೊಟ್ಟ.

ಆ ಕಡೆಯಿಂದ ಮೇಜರ್ ಏಬ್‌ರಾಸಿ ಉದ್ವೇಗದಿಂದ "ಸಾರ್......ಸಾರ್ ಚೈನಾ-ಇಂಡಿಯಾದ ಲೈನ್ ಆಫ್ ಆಕ್ಚುಯಲ್ ಕಂಟ್ರೋಲ್ ಹತ್ರ ಇರೋ ಥಿಕ್ ಫಾರೆಸ್ಟ್ ಒಳಾಗಡೆಯಿಂದ ನಮ್ಮ ಸೀಕ್ರೆಟ್ ಏಜೆಂಟ್ಸ್ ಈಗ್ತಾನೆ ಇನ್‌ಫರ್ ಮೇಶನ್ ಕಳ್ಸಿದಾರೆ. ಅದ್ರ ಪ್ರಕಾರ ಯಾರೋ ಒಬ್ಬ ಮಹಾನ್ ತಪೋಬಲ ಇರೋ ಮಹರ್ಷಿ, ನಂದೇಶದ ಎಲ್ಲಾ ರಾಜ್ಯಗಳಿಂದ ನೂರೆಂಟು ಋತ್ವಿಜರನ್ನ ಕರ್ಸ್ಕೊಂಡು ಯಾವ್ದೋ ಭಯಂಕರವಾದ ಯಾಗ ಮಾಡೋಕೆ ಸಿದ್ಧತೆ ಮಾಡ್ಕೊಳ್ತಾ ಇದಾನಂತೆ. ಇನ್ನೇನು ಅರ್ಧಗಂಟೆ ಒಳ್ಗೆ ಯಾಗ ಶುರು ಆಗ್ಬಿಡುತ್ತಂತೆ ಸಾರ್, ಆ ಯಾಗ ಪೂತೀ ಆಗೋಕೆ ಬಿಟ್ರೆ ನೀವು, ನಾವೂ, ಯಾರೂ ಬದುಕಿರಲ್ವಂತೆ ಸಾರ್. ಏನ್ಮಾಡ್ಲೀ ಸಾರ್ ?" ಅಂತ ನಡುಗುತ್ತಾ ಪರಿಹಾರ ಕೇಳಿದ.

ಸಾಹೇಬ್ರಿಗೆ ಮೈಕೈ ಪರಚಿಕೊಳ್ಳಲೆ ಅನಿಸಿತು. ಕಾಲನ್ನು ನೆಲಕ್ಕೆ ಝಾಡಿಸಿ "ಮಿಸ್ಟರ್ ಏಬ್‌ರಾಸಿ, ಇಂಥಾ ಕಾಕ್ ಅಂಡ್ ಬುಲ್ ಸ್ಟೋರೀಸ್ನ ನನ್ನ ಹತ್ರ ಡೈರೆಕ್ಟ್‌ಗಿ ಹೇಳೋಕೆ ನಾಚ್ಕೆ ಆಗೋಲ್ವಾ ನಿಮ್ಗೆ ? ಅಲ್ರೀ ಇಂಥಾ ಸಿಲ್ಲಿ ವಿಷ್ಯಕೆಲ್ಲಾ ನನ್ನ ಏನ್ಮಾಡ್ಬೇಕು ಅಂತ ಕೇಳ್ತಿರಲ್ರೀ ? ಯಾರೋ ? ಎಲ್ಲೋ ? ಯಾವ್ದೋ ! ಯಾಗ ಮಾಡಿದ್ರೆ ನಿಂ ತಾತ್ನ ಗಂಟೇನು ಹೋಗಲ್ಲ. ಆಕಾಶನೇ ನೀ ತಲೇ ಮೇಲೇ ಬಿದ್ದೇಹೋಯ್ತು ಅನ್ನೋಹಾಗೆ ಆಡ್ತಿರಲ್ರೀ. ನಿಮ್ಗೆ ಕಾಮನ್‌ಸೆನ್ಸ್ ಇಲ್ಲ ಅಂತ ತೋರುತ್ತೆ. ನೋಡಿ, ಇದೇ ಮೊದ್ಲು, ಇದೇ ಕೊನೆ, ಇನ್ನೊಂದ್ಸಾರಿ ಇಂಥಾ ಸಿಲ್ಲಿ ವಿಷ್ಯಕ್ಕೆ ನನ್ನ ಡಿಸ್ಟರ್ಬ್ ಮಾಡಿದ್ರೆ ನಿಮ್ಮೇಲೆ ಸೀರಿಯಸ್ ಆ್ಯಕ್ಷನ್ ತೊಗೋಬೇಕಾಗುತ್ತೆ. ಅಂಡರ್ ಸ್ಟ್ಯಾಂಡ್ ? ಡಿಸ್‌ಕನೆಕ್ಟ್ ದಿ ಬ್ಲಡಿ ಲೈನ್ ಐಸೆ" ಅಂತ ಮಿನಿಸ್ಟರ್ ಸಾಹೇಬ್ರು ಗುಡುಗಿದರು.

ಸಾಹೇಬ್ರ ಜೊತೆ ಚರ್ಚೆ ಮಾಡುತ್ತಿದ್ದ ಅಧಿಕಾರಿಗಳು, ಮೊಟ್ಟ ಮೊದಲಿಗೆ ಸಾಹೇಬ್ರು ರೇಗಿದ್ದನ್ನು ನೋಡಿ ಬೆದರಿ, ಬೆವತು ಹೋದರು.

ಮೇಜರ್ ಏಬ್‌ರಾಸಿಗೆ ದಿಕ್ಕೇ ತೋಚಲಿಲ್ಲ ದಿಗ್ಭ್ರಮೆಯಿಂದ "ಸಾರ್... ಸಾರ್ ಸ್ವಲ್ಪ ತಾಳಿ ಸಾರ್. ಲೈನ್‌ನ ಡಿಸ್‌ಕನೆಕ್ಟ್ ಮಾಡ್ಬೇಡಿ ಪ್ಲೀಜ್" ಎಂದು ಗೋಗರೆದ.

"ಇನ್ನೂ ಏನ್ರೀ...ನಿಮ್‌ಗೋಳು ?" ಅಂತ ಸಿಡುಗುಟ್ಟಿದರು ಸಾಹೇಬ್ರು.

"ಸಾರ್ ಆಯಾಗಾನ ಇಗ್ನೋರ್ ಮಾಡೋಕೇ ಆಗಲ್ಲ ಸಾರ್. ಯಾಕಂದ್ರೆ ಅದು ಪುತ್ರಕಾಮೇಷ್ಠಿಯಾಗ ಅಲ್ಲ ಸಾರ್. ಆ ಯಾಗ ಭ್ರಷ್ಟ ಮಂತ್ರಿಗಳನ್ನ, ಭ್ರಷ್ಟ ಅಧಿಕಾರಿಗಳನ್ನ ಸುಟ್ಟು ಬೂದಿ ಮಾಡೋ ಮಹಾಯಾಗ ಸಾರ್" ಅಂತ ಮತ್ತಷ್ಟು ಗಾಬರಿಯಿಂದ ಹೇಳಿದ ಮೇಜರ್ ಏಬ್‌ರಾಸಿ.

ಸಾಹೇಬ್ರು ಈಗ ಕೊಂಚ "ಡೌನ್" ಆದರು. "ಹಿಃ ಹಿಃ" ಅಂತ ಬಲವಂತದ ನಗೆ ಬೀರಿ, "ಏ...ಏನ್ರೀ ಮೇಜರ್ ನೀವೂ ಓದ್ದೋರೇ, ಇದನ್ನೆಲ್ಲಾ ನಂಬ್ತೀರ ? ಈ ಕಲಿಗಾಲ್ದಲ್ಲಿ ಅಷ್ಟೊಂದು ತಪೋಬಲ ಇರೋ ಫೆಲೋಸ್ ಇರೋಕೆ ಸಾಧ್ಯಾನ ? ಅವೆಲ್ಲಾ ರಾಮಾಯಣ, ಮಹಾಭಾರತಗಳ ಜೊತೇ ಮಾಯ ಆಗೋಯ್ತು. ಈಗಿರೋರೆಲ್ಲಾ ಬರೀ ನನ್ನಂಥೋರು, ನಿಂಮ್ಮಂಥೊರು, ಧೈರ್ಯವಾಗಿರಿ. ಯಾಗ

ಯಜ್ಞ, ಮಂತ್ರ, ತಂತ್ರ, ಬಡಜನರ ಶಾಪ, ಯಾವ್ದೂ ನಮ್ಮನ್ನ ಏನೂ ಮಾಡಲ್ಲ. ಧೈರ್ಯವಾಗಿರಿ" ಅಂತ ಧೈರ್ಯ ತುಂಬಿದರು ಸಾಹೇಬ್ರು.

"ಸಾರ್ ನೀವು ಹೇಳೋದೂ ಕರೆಕ್ಟ್. ಆದ್ರೂ ರಿಸ್ಕ್ ತೊಗೊಳೋ ಹಾಗೇ ಇಲ್ಲ. ಯಾಕಂದ್ರೇ ಈಗ ಮಾಡ್ತಿರೋ ಯಾಗ ಒಂಥರಾ ಸ್ಪೆಶಲ್ ಸಾರ್. ನಿಮ್ಗೆ ಗೊತ್ತಿರ್ಬೇಕು, ಹಿಂದೆ ಜನಮೇಜಯ ಮಹಾರಾಜ ಸರ್ಪಸತ್ರ ಮಹಾಯಾಗ ಮಾಡ್ದಾಗ ಸರ್ಪಗಳು ತಾವಾಗೇ ಆಕಾಶ ಮಾರ್ಗವಾಗಿ ಹಾರ್ಕೊಂಡು ಬಂದು ಅಗ್ನಿಗೆ ಬಿದ್ದು ಸುಟ್ಟು ಹೋದ್ವಂತಲ್ಲಾ ಸಾರ್. ಅದೇ ಯಾಗಾನಾ ಅದೇ ಸ್ಟ್ಯಾಂಡರ್ಡ್ನಲ್ಲಿ, ಈಗ ಸರ್ಪಗಳ ಬದ್ಲು ಭ್ರಷ್ಟ ಮಂತ್ರಿಗಳು ಮತ್ತು ಭ್ರಷ್ಟ ಅಧಿಕಾರಿಗಳ ಮೇಲೆ ಪ್ರಯೋಗಿಸುತ್ತಾರಂತೆ ಸಾರ್. ನಮ್ಮ ಸೀಕ್ರೇಟ್ ಟೀಮಿನ ಲಿ ಡರ್ ಕರ್ನಾಟಕದ ಋತ್ವಿಜ ನನ್ನ ಉಪಾಯ್ವಾಗಿ ಒಳ್ಗೆ ಹಾಕ್ಕೊಂಡು, ಆಹುತಿ ಹ್ಯಾಗೆ ಕೊಡ್ತಾರೆ ಅನ್ನೋದನ್ನ ತಿಳ್ಕೊಂಡು ನಂಗೆ ಹೇಳ್ದ ಸಾರ್. ಅವ್ನ ಪ್ರಕಾರ ಒಬ್ಬಬ್ಬ ಋತ್ವಿಜರು, ಆಯಾ ರಾಜ್ಯದ ಭ್ರಷ್ಟಮಂತ್ರಿಯೊಬ್ಬನ ಅಥ್ವಾ ಭ್ರಷ್ಟಅಧಿಕಾರಿಯ ಹೆಸರಿಗೆ ಸಂಕಲ್ಪ ಮಾಡಿ 'ಹೇ ಮೃತ್ಯುದೇವತೆಯೇ, ತಾಯಿ ಸಮಾನವಾದ ಈ ಪುಣ್ಯಭೂಮಿಗೇ ದ್ರೋಹ ಮಾಡುತ್ತಿರುವ ಈ ವ್ಯಕ್ತಿಯ ನಿರ್ಮೂಲನಾರ್ಥವಾಗಿ ಈ ಆಹುತಿ ಕೊಡುತ್ತಿದ್ದೇವೆ. ಕೃಪೆಮಾಡಿ ಸ್ವೀಕರಿಸು' ಅಂತ ಪ್ರಾರ್ಥಿಸಿ 'ಯಮಾಯ ಸ್ವಾಹ। ಯಮಾಯ ಇದನ್ನ ಮಮ।' ಅಂತ ಮೂರು ಬಾರಿ ಆಜ್ಯ ಹೋಮ ಮಾಡ್ತಾರಂತೆ ಸಾರ್. ಆಕೂಡ್ಲೇ ಆ ವ್ಯಕ್ತಿ ಪಾರ್ಲಿಮೆಂಟ್ ಹೌಸ್ನಲ್ಲಿ ಇದ್ರೂ ತಪ್ಪಿಸಿಕೊಳ್ಳೋಕೇ ಆಗ್ದೇ, ಮ್ಯಾಗ್ನೆಟ್ ಕಬ್ಬಿಣನ ಹ್ಯಾಗೆ ಎಳ್ಕೊಳ್ಳುತ್ತೋ ಹಾಗೆ, ಆಕಾಶ್ದಲ್ಲಿ 'ಝುಯ್' ಅಂತ ಹಾರ್ಕೊಂಡ್ಹೋಗಿ, ಧಗ್ ಧಗ್ ಅಂತ ಉರೀತಿರೋ ಯಜ್ಞಕುಂಡದೊಳಕ್ಕೆ 'ದಬಕ್' ಅಂತ ತಲೆಕೆಳಗಾಗಿ ಬಿದ್ದು ಬೂದಿ ಆಗ್ಹೋಗ್ತಾನಂತೆ ಸಾರ್. ಆಕಾಶ್ದಲ್ಲಿ ನಾವೆಲ್ಲಾ ಒಬ್ಬೊಬ್ರಾಗಿ ಸಂಕ್ಟಪಟ್ಕೊಂಡು ಹಾರೋಕ್ತಿ ರೋದನ್ನ ವಿರೋಧ ಪಕ್ಷದೋರು ನೋಡಿ ಹಾಸ್ಯ ಮಾಡಲ್ವಾ ಸಾರ್ ? ಅದೂ ಹೋಗ್ಲಿ ಅಂದ್ರೆ, ನಾವೆಲ್ಲಾ ಹೋದ್ಮೇಲೆ ಈ ಪುಣ್ಯಭೂಮಿ ನಿಷ್ಠಾವಂತ್ರ ಕೈಸೇರಿ ಬಿಡುತ್ತಲ್ಲ ಸಾರ್ ?" ಅಂತೆಲ್ಲಾ ವಿವರಿಸಿದ ಮೇಜರ್ ಏಬ್ರಾಸಿ.

ಇಷ್ಟನೆಲ್ಲಾ ಉಸಿರಿ ಹಿಡಿದು ಕೇಳುತ್ತಿದ್ದ ಮಿನಿಸ್ಟರ್ ಸಾಹೇಬ್ರಿಗೆ ಎದೆ ನಡುಗಿತು. ನಾಲಿಗೆಯ ಮೇಲಿನ ದ್ರವ ಒಣಗಿತು. ತೊಡೆ ಅದುರ ತೊಡಗಿತು. ಕ್ಷಣಗಳಾದ ಮೇಲೆ ಸಾವರಿಸಿಕೊಂಡು, ಕೃತಕ ಧೈರ್ಯ ತೋರಿಸಿ ಕೊಳ್ಳುತ್ತಾ 'ಮೇಜರ್ ಏಬ್ರಾಸಿ ಬ್ರದರ್, ಇಮಿಡಿಯಟ್ಟಾಗಿ ಸರ್ಕಾರ್ದ ಖರ್ಚಲ್ಲಿ, ಅವ್ರು ಮಾಡ್ತಿರೊ,

ಯಾಗ ನಿಷ್ಫಲ ಆಗೋ ಹಾಗೆ. ಒಂದು ಆ್ಯಂಟಿ ಯಾಗ ಮಾಡ್ಸಿ ಬಿಡಿ" ಅಂತ ಸರಾಗ ವಾಗಿ ಅಪ್ಪಣೆ ನೀಡಿದರು.

ಮೇಜರ್ ಏಬ್‌ರಾಸಿ ಅನುಮಾನಿಸುತ್ತಾ "ಸಾರ್ ಅದಕ್ಕೆ ಬಾರಿ ಹಣ ಖರ್ಚಾ ಗುತ್ತೆ ಸಾರ್" ಅಂತ ಉತ್ತರಿಸಿದ.

ಮಿನಿಸ್ಟರ್ ಸಾಹೇಬ್ರು ಬೇಸರದಿಂದ ಟೇಬಲ್ ಮೇಲೆ ಬಲವಾಗಿ ಗುದ್ದಿ "ಡ್ಯಾಮಿಟ್, ದೇಶಕ್ಕಿಂತ ದುಡ್ಡೇ ಜಾಸ್ತಿ ಆಗೋಯ್ತಾ ನಿಂಮ್ಗೆ. ಅಲ್ರೀ ಹರ್ಶದ್ ಮೆಹ್ತಾ ನುಂಗುದ್ನಲ್ಲ ಅದಕ್ಕಿಂತ ಜಾಸ್ತಿ ಆಗುತಾ ? ಆಗ್ಲೇಳಿಬಿಡಿ. ವರ್ಲ್ಡ್ ಬ್ಯಾಂಕ್ನೋರು ಸಾಲ ಕೊಡೋಕೆ ಸಿದ್ವಾಗಿದಾರೆ. ಅದ್ರ ಚಿಂತೆ ಬೇಡ ನಿಮ್ಗೆ ಸ್ಟಾಪ್ ಆಲ್ ಅದರ್ ಜಾಬ್ಸ್. ಡೂ ಆಜ್ ಐ ಟೋಲ್ಡ್ ಯು. ನೋಡಿ ಇದ್ರಲ್ಲಿ ನೀವು ಗೆದ್ರೆ ನಿಂಮ್ಗೆ. ನ್ಯೂಯಾರ್ಕ್‌ನಲ್ಲಿರೋ ನಂ ಆಫೀಸಲ್ಲಿ ಮ್ಯಾನೇಜರ್ ಪೋಸ್ಟ್ ಗ್ಯಾರಂಟಿ, ಓಕೇ ?" ಅಂತ ಹೇಳಿ ಫೋನ್ ಕೆಳಗಿಟ್ಟರು.

"ಐ ವಿಲ್ ಟ್ರೈ ಮೈ ಬೆಸ್ಟ್ ಸಾರ್" ಅಂತ ಉತ್ತರಿಸಿ ಮೇಜರ್ ಏಬ್‌ರಾಸಿ ತಾನೂ ಫೋನ್ ಕೆಳಗಿಟ್ಟು, ಕಾರ್ಯಸಾಧನೆಗೆ ಸಿದ್ಧನಾದ.

ಆನಂತರ, ಎರಡು ತಾಸುಗಳಷ್ಟು ಹೊತ್ತಾದ ಮೇಲೆ ಮೇಜರ್ ಎಬ್‌ರಾಸಿ ಮಿನಿಸ್ಟರ್ ಸಾಹೇಬ್ರನ್ನ ಸಂಪರ್ಕಿಸಿ ಅತ್ಯಂತ ಸಂತೋಷದಿಂದ "ಸಾರ್...ಸಾರ್... ವೆರಿ ವೆರಿ ಗುಡ್ ನ್ಯೂಸ್ ಸಾರ್. ನಮ್ಮನ್ನೆಲ್ಲಾ ನಾಶ ಮಾಡ್ಬೇಕು ಅಂತಿದ್ದ ಆ ಯಜ್ಞ ಶುರೂನೇ ಆಗ್ಲಿಲ್ವಂತೆ ಸಾರ್. ಸೋ, ವಿ ಆರ್ ಆಲ್ ವೆರಿ ವೆರಿ ಸೇಫ್ ಸಾರ್" ಅಂತ ಹೇಳಿದ.

ಮಿನಿಸ್ಟರ್ ಸಾಹೇಬ್ರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. "ಸ್ಪ್ಲೆಂಡಿಡ್, ಮಾರ್ವ ಲೆಸ್, ವೆಲ್‌ಡನ್ ಮೈ ಬಾಯ್. ಯಾಕೆ ಯಜ ಸ್ಟಾರ್ಟೇ ಆಗ್ಲಿಲ್ವಂತೆ ?" ಅಂತ ಪ್ರಶ್ನೆಹಾಕಿದರು.

"ಸಾರ್ ತುಂಬಾ ಇಂಟ್ರೆಸ್ಟಿಂಗಾಗಿದೆ. ಇನ್ನೇನು ಒಬ್ಬ ಮಂತ್ರಿಯ ಮೇಲೆ ಸಂಕಲ್ಪ ಮಾಡ್ಬೇಕು ಅನ್ನೋವಾಗ, ಕೇರಳದ ಋತ್ವಿಜ ಎದ್ದು ನಿಂತು. ನಿಲ್ಸೀ ಈ ಯಾಗಾನ, ಇದು ಧರ್ಮಬಾಹಿರವು. ಏಕೆಂದರೆ, ಕೇವಲ ಮಂತ್ರಿಗಳು ಮತ್ತು ಅಧಿ

ಕಾರಿಗಳಿಗೆ ಈ ಶಿಕ್ಷೆ ನೀಡುವುದು ನ್ಯಾಯವಲ್ಲವು. ಸಾಮಾನ್ಯ ಜನರಲ್ಲೂ ಭ್ರಷ್ಟತೆ ಇಲ್ಲವೆಂದು ಹೇಗೆ ಹೇಳುವಿರಿ ? ಅವರಿಗೂ ವಿಧಿವತ್ತಾಗಿ ಶಿಕ್ಷೆ ವಿಧಿಸುವುದು ಧರ್ಮ ಸಮ್ಮತ ಈ ಕೂಡಲೇ ಲಿಸ್ಟ್‌ನಲ್ಲಿ ಅವರನ್ನು ಸೇರಿಸತಕ್ಕದ್ದು' ಎಂದು ಹೇಳಿ ಕೂತ ನಂತೆ ಸಾರ್" ಅಂತ, ಅತ್ಯುತ್ಸಾಹದಿಂದ ಹೇಳಿದ ಮೇಜರ್ ಏಬ್‌ರಾಸಿ.

"ಆಮೇಲೇ ಸಾರ್ ಇನ್ನೊಬ್ಬ ಋತ್ವಿಜ ಎದ್ದು ನಿಂತು ನಮ್ರತೆಯಿಂದ ಕೈ ಜೋಡಿಸಿಕೊಂಡು ಮುಖ್ಯ ಋತ್ವಿಜನಿಗೆ ಹೇಳಿದನಂತೆ ಸಾರ್ ಸನ್ನಿಧಾನದಲ್ಲಿ ನನ್ನದೂ ಒಂದು ಕೋರಿಕೆ, ಅದೇನೆಂದರೆ, ಮಂತ್ರಿಗಳು ಮತ್ತು ಅಧಿಕಾರಿಗಳು ಲಕ್ಷಾಂತರ ವಂಚನೆ ಮಾಡಿರುವ ವಿಷಯ ಎಲ್ಲರಿಗೂ ತಿಳಿದಿರುವ ಸಂಗತಿಯೇ. ಆದರೆ ಅವರಲ್ಲಿ ಕೆಲವರು ತದನಂತರದಲ್ಲಿ ಗೋಬ್ರಾಹ್ಮಣರಿಗೆ ಸಾಕಷ್ಟು ತೃಪ್ತಿಪಡಿಸಿ, ಅಪಾರ ಪುಣ್ಯವಂ ಸಂಪಾದಿಸಿರುತ್ತಾರೆ. ಹೀಗಾಗಿ ಎಲ್ಲರಿಗೂ ಏಕರೂಪದ ಶಿಕ್ಷೆಯುಂ ವಿಧಿಸುವುದು ಯಾವ ನ್ಯಾಯ ? ಇದಕ್ಕೆ ನನ್ನ ವಿರೋಧವಿದೆ "ಎಂದು ಆಕ್ಷೇಪಣೆ ಮಾಡಿ ಯಜ್ಞ ಶಾಲೆಯನ್ನು ತ್ಯಜಿಸಿ ಆಚೆಗೆ ನಡೆದನಂತೆ"

"ಫರ್ದರ್ ಏನಾಯ್ತು ಬ್ರದರ್" ಆತುರದಿಂದ ಕೇಳಿದರು ಮಿನಿಸ್ಟರ್ ಸಾಹೇಬ್ರು.

"ಅನಂತ್ರ ಸಾರ್ ಇನ್ನೊಬ್ಬ ಎದ್ದು ನಿಂತ್ಕೊಂಡು ಸಭೆಗೆ ವಂದಿಸಿ 'ಸ್ವಾಮಿನ್ ನನ್ನದೂ ಒಂದು ಮನವಿ. ನಾನು ಮೂಲತಃ ಮಹಾರಾಷ್ಟ್ರದವನು. ಅಲ್ಲಿಯೂ ಭ್ರಷ್ಟಮಂತ್ರಿಗಳು, ಅಧಿಕಾರಿಗಳು ಹೇರಳವಾಗಿ ಇರುತ್ತಾರೆ. ಆದರೆ ಅವರೆಲ್ಲರೂ ಅಷ್ಟೋ ಇಷ್ಟೋ ಜನೋಪಕಾರಿ ಯೋಜನೆಗಳನ್ನು ಪೂರ್ಣಗೊಳಿಸಿ. ಅಲ್ಪಸ್ವಲ್ಪ ಪುಣ್ಯವಂ ಸಂಪಾದಿಸಿರುತ್ತಾರೆ. ಆದರೆ ಸ್ವಾಮಿನ್, ಕರ್ನಾಟಕದ ಸ್ಥಿತಿಯೇ ಬೇರೆ. ಅಲ್ಲಿ ಭ್ರಷ್ಟತೆ ಜೊತೆಗೆ ಜನೋಪಕಾರಿ ಯೋಜನೆಗಳು ಏನೇನೂ ಆಗಿಲ್ಲವು. ಅಂದರೆ ಅಲ್ಲಿ ನಮ್ಮಷ್ಟು ಪುಣ್ಯವಂ ಗಳಿಸಿದವರು ಇಲ್ಲ. ಹೀಗಾಗಿ ಎರಡೂ ರಾಜ್ಯದವರಿಗೆ' ಒಂದೇ ಮಟ್ಟದ ಶಿಕ್ಷೆಯುಂ ವಿಧಿಸುವುದನ್ನು ನಾವು ಒಪ್ಪಲಾರೆವು. ಕರ್ನಾಟಕದವರಿಗೆ ನಮಗಿಂತ ಎರಡು ಪಟ್ಟು ಶಿಕ್ಷೆ ವಿಧಿಸುವುದು ನ್ಯಾಯವು" ಎಂದು ಹೇಳಿ ಸಾರ್, ಕರ್ನಾಟಕದ ಋತ್ವಿಜನಿಗೆ ಕಣ್ಣು ಹೊಡೆದು ಕೆಣಕಿದನಂತೆ, ಇಷ್ಟರಲ್ಲಿ ಸಾರ್, ತಮಿಳು ನಾಡಿನ ಪ್ರತಿನಿಧಿ ಸಿಟಿದು ನಿಂತು "ಮುಖ್ಯ ಋತ್ವಿಜೋತ್ತಮ ನಮ್ಮ ರಾಜ್ಯಕ್ಕೆ ಕಾವೇರಿ ನೀರಿನ ಹಂಚಿಕೆಯುಲ್ಲಿ ಅನ್ಯಾಯವಾಗಿದೆ. ಅನ್ಯಾಯ ಮಾಡಿದ ಕರ್ನಾಟಕದ ಮಂತ್ರಿ ಮತ್ತು ಅಧಿಕಾರಿಗಳನ್ನೂ ಪಟ್ಟಿಯುಲ್ಲಿ ಸೇರಿಸಿ ಶಿಕ್ಷೆ ವಿಧಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯವು ಎಂದು ಕೇಳಿಕೊಂಡನಂತೆ ಸಾರ್."

"ಶುದ್ಧ ತಪ್ಪು ಇದಕ್ಕೆ ಒಪ್ಪಿಗೆ ಸಿಕ್ಕಿತೇ ಬ್ರದರ್ ?"

"ಉಹುಃ ! ಸಾರ್ ಅದೇ ವೇಳೆಗೆ ಯಜ್ಞಕುಂಡದಿಂದ ಅಗ್ನಿ ದೇವ ಪ್ರತ್ಯಕ್ಷನಾಗಿ "ವಿಪ್ರಶ್ರೇಷ್ಠರೇ, ಯಜ್ಞದ ಮೂಲ ಉದ್ದೇಶಕ್ಕೇ ಈ ಹಂತದಲ್ಲಿ ತಿದ್ದುಪಡಿ ತರುವುದು ಶಾಸ್ತ್ರ ಸಮ್ಮತವಲ್ಲವು. ಕಾವೇರಿ ಜಲ ವಿವಾದ ಎರಡು ರಾಜ್ಯಗಳ ಮಧ್ಯೆ ಉಂಟಾಗಿರುವ ಭಿನ್ನಾಭಿಪ್ರಾಯವು. ಅದನ್ನು ಅವರವರೇ ಬಗೆಹರಿಸಿಕೊಳ್ಳತ್ತಕ್ಕದ್ದು" ಎಂದು ತೀರ್ಪಿತ್ತನಂತೆ"

"ನೀವು ಹೇಳ್ತಾ ಇರೋದನ್ನ ಕೇಳ್ತಾ ಇದ್ರೇ, ಸಾಕ್ಷಾತ್ ಪಾರ್ಲಿಮೆಂಟ್ನಲ್ಲಿ ಕೂತಿದ್ದೇನೋ ಅಂತ ಅನ್ಸುತ್ತೆ. ಆಮೇಲೇನಾಯ್ತು ಬ್ರದರ್ ಏಬ್‌ರಾಸಿ ?"

"ಆ ಮೇಲೆ ಸಾರ್, ಅಗ್ನಿದೇವ ನೀಡಿದ ತೀರ್ಪಿನಿಂದ ಅಸಮಾಧಾನಗೊಂಡ ತಮಿಳು ನಾಡಿನ ಋತ್ವಿಜ ಉದ್ವೇಗದಿಂದ ಕೃಷ್ಣಾಂಜನವನ್ನು ಕರ್ನಾಟಕದ ಋತ್ವಿಜನ ಮುಖದ ಹತ್ತಿರ ಕೊಡವಿ, ಕಮಂಡಲದಲ್ಲಿದ್ದ ಶುದ್ಧೋದಕವನ್ನು ಯಜ್ಞಕುಂಡಕ್ಕೆ ಸುರಿದು ಸಭಾತ್ಯಾಗ ಮಾಡಿದನಂತೆ. ಆಮೇಲೆ ಸಾರ್, ಇನ್ನೊಬ್ಬ ಹಿರಿಯ ಋತ್ವಿಜ ಎದ್ದು ನಿಂತು "ಹೇ ವಿಪ್ರೋತ್ತಮರೇ, ದೇಶದ ಎಲ್ಲ ಭ್ರಷ್ಟರನ್ನು ಏಕ ಕಾಲದಲ್ಲಿ ಕಾಲನ ಮನೆಗೆ ದೂಡುವುದು ದೇಶದ ಹಿತದೃಷ್ಟಿಯಲ್ಲಿ ಸರಿಯಲ್ಲವು. ಹಾಗೆ ಮಾಡಿದುದೇ ಆದರೆ ಸಾವಿರಾರು ಸುಮಂಗಲೆಯರು ವಿಧವೆಯರಾಗಿ ನಮಗೆ ಶಾಪವಂ ನೀಡುವರು. ಅಲ್ಲದೆ ಯಮಲೋಕದಲ್ಲಿ ಭ್ರಷ್ಟಾಚಾರವು ಅಧಿಕಗೊಳ್ಳಲೂ ಬಹುದು. ಆದ್ದರಿಂದ ಮೊದಲಿಗೆ ಐದೇ ಐದು ಮಹಾಭ್ರಷ್ಟರ 'ಶಾರ್ಟ್ ಲಿಸ್ಟ್' ತಯಾರಿಸಿ, ಅದರಂತೆ ಅವರನೆಲ್ಲಾ ಅಗ್ನಿಗೆ ಆಹುತಿ ಕೊಡಿಸಿದರೆ, ಮಿಕ್ಕಭ್ರಷ್ಟರಿಗೆ ಎಚ್ಚರಿಕೆ ನೀಡಿದಂತೆ ಆಗಬಲ್ಲದು. ಹೀಗಾಗಿ ಅವರೆಲ್ಲಾ ಧರ್ಮ ಮಾರ್ಗದಲ್ಲಿ ನಡೆಯುವರು. ತದ ನಂತರ ಬೇಕಾದಲ್ಲಿ ಇನ್ನೊಂದು ಬಾರಿ ಯಜ್ಞವನ್ನು ಕೈಗೊಳ್ಳಬಹುದು. ಇದು ನನ್ನ ಸಲಹೆಯು ಸ್ವಾಮಿನ್" ಎಂದು ಸೂಚಿಸಿದನಂತೆ ಸಾರ್. ಈ ಸಲಹೆ ಎಲ್ಲಾರೂ ಒಪ್ಗೆ ಆಯ್ತಂತೆ ಅದ್ರಪ್ರಕಾರ ಐದು ಮಹಾ ಭ್ರಷ್ಟರ ಲಿಸ್ಟ್ ತಯಾರಾಯಿತಂತೆ ಸಾರ್"

"ಆ ಐದು ಮಹಾ ಭ್ರಷ್ಟರ ಪಟ್ಟಿಯಲ್ಲಿ ನನ್ನ ಹೆಸ್ರು ಇತ್ತಾ" ಅತ್ಯಂತ ಗಾಬರಿಯಿಂದ ಕೇಳಿದರು ಮಿನಿಸ್ಟರ್ ಸಾಹೇಬ್ರು.

"ಆ ವಿಷ್ಯ ಬಿಡೀ ಸಾರ್, ಅದೇನು ಮುಖ್ಯವಲ್ಲ. ಆದ್ರೆ ಸಾರ್ ಆ ಶಾರ್ಟ್ ಲಿಸ್ಟ್ ನಿಂದಲೇ ಸಾರ್, ಉಸಾಗ ತೋಪ್ಕ್ಯಂಡ್ಹೋಗಿದ್ದು."

"ಹೌದೇನ್ರೀ ಆಶ್ಚರ್ಯ ಆಗುತ್ತೆ, ಹ್ಯಾಗಾಯ್ತು ಅಂತ ಹೇಳ್ತೀರಾ ಮಿಸ್ಟರ್ ಏಬ್‌ರಾಸಿ ?" ಅತ್ಯಂತ ಹರ್ಷಚಿತ್ತರಾಗಿ ಪ್ರಶ್ನೆಹಾಕಿದರು ಮಿನಿಸ್ಟರ್ ಸಾಹೇಬ್ರು.

"ಹ್ಯಾಗಾಯ್ತು ಅಂದ್ರೆ ಸಾರ್, ಮಹಾಭ್ರಷ್ಟರು ಅಂತ ಹೇಳಿ ಐದು ಜನರ ಲಿಸ್ಟ್ ಮಾಡಿದ್ರಲ್ಲ ಸಾರ್, ಅವ್ರೆಲ್ಲಾ ಒಂದೇ ರಾಜ್ಕೀಯ ಪಾರ್ಟಿ ಜೊತ್ಗೆ ಒಂದೇ ರಾಜ್ಯದವರಾಗಿದ್ರಂತೆ. ಹೀಗಾಗಿ ಇದ್ರಲ್ಲಿ ಏನೋ ರಾಜ್ಕೀಯ ಇದೆ ಅಂತ ಆ ರಾಜ್ಯದ ಋತ್ವಿಜರು ಉದ್ರಿಕ್ತಗೊಂಡು ಹಿಂಸಾಚಾರಕ್ಕೆ ಇಳಿದರಂತೆ, ಕೈಗೆ ಸಿಕ್ಕಿದ ಕೃಷ್ಣಾಂಜನ, ಕಮಂಡಲ, ದಂಡ, ಆಜ್ಯದ ಪಾತ್ರೆ, ಯಜ್ಞಕುಂಡದ ಸುತ್ತಾ ಜೊಡ್ಸಿದ್ದ ಇಟ್ಟಿಗೆ ಎಲ್ಲದರಿಂದ, ಸಿಕ್ಕಿಸಿಕ್ಕೋರ್ಗೆಲ್ಲಾ ಹೊಡೆಯೋಕೆ ಶುರು ಮಾಡಿಬಿಟ್ರಂತೆ ಸಾರ್. ಕೆಲವು ಋತ್ವಿಜರಿಗೆ ತೀವ್ರವಾದ ಗಾಯಗಳಾಯ್ತಂತೆ. ಇವ್ರ ಕಚ್ಚಾಟ ನೋಡ್ಲಾರ್ದೆ ಅಗ್ನಿದೇವ ಬೇಜಾರ್ಪಟ್ಕೊಂಡು ಯಜ್ಞ ಕುಂಡ್ದಿಂದ ಎದ್ದು ಹೊರ್ಟೇ ಹೋದ್ನಂತೆ. ಒಟ್ನಲ್ಲಿ ಸಾರ್, ಕಚ್ಚಾಟ್ದಿಂದ ನಾವೆಲ್ಲಾ ಬಚಾವ್‌ಆದ್ವಿ. 'ಕಚ್ಚಾಟ ಚಿರಾಯುವಾಗಲಿ' ಅನ್ನೋ ಹೊಸ ಸ್ಲೋಗನ್ ಕೂಗೋಣ ಅನ್ಸುತ್ತೆ. ಕೂಗ್ಲೇ ಸಾರ್ ?" ಕೇಳಿದ ಮೇಜರ್ ಏಬ್‌ರಾಸಿ.

ಪೈನಾಟ್ "ಕಚ್ಚಾಟ ಚಿರಾಯುವಾಗಲಿ" ಎಂದು ತುಂಬು ಗಂಟಲಿನಿಂದೆ ತಾವೂ ಅರಚಿದರು ಮಿನಿಸ್ಟರ್ ಸಾಹೇಬ್ರು.

ಹಾದಿಯಲ್ಲಿ ಕೇಳಿಸಿದ್ದು :

ಬೆಂಗಳೂರಿನ ವಾಹನ ಸಂಚಾರ ವ್ಯವಸ್ಥೆಯನ್ನ ಉತ್ತಮ ಪಡಿಸೋಕ್ಕೆ ಅಂತ ಅಮೆರಿಕಾದಿಂದ ಕರೆಸಿದ ತಜ್ಞ ಈಗ ಸನ್ಯಾಸ ತಗೊಂಡು ಪಾಂಡಿಚೆರಿಲಿ ಇದ್ದಾನಂತೆ.

ಅಪರಂಜಿ ಮತ್ತು ಬ್ರೈನ್ ಸ್ಟಾರ್ಮಿಂಗ್

ಪ್ರಭಾ

ಪ್ರಿಯ ಸಂಪಾದಕರೇ, ನಮಸ್ಕಾರ.

ಮೇ ತಿಂಗಳ ಅಪರಂಜಿ, ಮೇ ತಿಂಗಳಲ್ಲೇ ಹದಿನೇಳನೇ ತಾರೀಖಿನಂದು ಕೈ ಸೇರಿತು. ಓದುಗರು ಸ್ಪಂದಿಸುತ್ತಿರುವುದನ್ನು ತುಂಬಾ ಖುಷಿಯಿಂದ ಹೇಳಿಕೊಂಡಿದ್ದೀರಿ. ಮಗುವಿಗೆ ಮಾತು ಬರುವುದು ತಡವಾದಾಗ, ಅದರ ಅಪ್ಪ, ಅಮ್ಮ, ತಾತ, ಅಜ್ಜಿ, ಮುತ್ತಾತ, ಹತ್ತಿರದ ದೂರದ ನೆಂಟರು, ಹಿತೈಷಿಗಳು ಒದ್ದಾಡುವ ರೀತಿ ನಿಮಗೂ ಗೊತ್ತಿರಬೇಕು. ಆದರೆ, ಒಂದು ಸಲ ತಡವಾಗಾದರೂ ಮಗು ಮಾತು ಕಲಿತು, ಮಾತಾಡುಕ್ಕೆ ಶುರು ಮಾಡಿದರೆ, ಮನೆಯಲ್ಲಿನ ಹಿರಿಯರು, ಮಾತಿನ ಪ್ರಹಾರ ಸಹಿಸಿಕೊಳ್ಳಲು ಆಗದೆ ಆದಷ್ಟು ಹೊತ್ತು ಮನೆಯಿಂದ ಆಚೆ ಕಾಲಕಳೆಯ ಬೇಕಾದ ಪರಿಸ್ಥಿತಿ ಹುಟ್ಟಿಸಿಕೊಳ್ಳುವರಂತೆ. ತಮಗೆ ಇಷ್ಟರಲ್ಲೇ ವಿದೇಶ ಪ್ರವಾಸ ಯೋಗ ಇದ್ದರೂ, ಅದನ್ನ ತಪ್ಪಿಸಿಕೊಂಡು, ಓದುಗರ ಸಂಗಡ ನೀವು 'ಜನವಾಣಿ' ಕಾರ್ಯಕ್ರಮ ನಡೆಸಲೇ ಬೇಕಾಗುತ್ತೆ ! ಈ ನಿಟ್ಟಿನಲ್ಲಿ ೯೨ನೇ ಸಂಚಿಕೆಯಲ್ಲಾದರೂ ನೀವು 'ಪ್ರಿಯ ಓದುಗರೇ' ಆರಂಭಿಸಿದ್ದು ಶುಭ ಲಕ್ಷಣ, ಇದು ಒನ್ ವೇ ಟ್ರಾಫಿಕ್ ಆಗದಿರಲು ನೀವು ಮತ್ತೂ ಒಂದು ಅಂಕಣ ಆರಂಭಿಸಬೇಕಿದ್ದು, ಅದು ಪ್ರಿಯ ಸಂಪಾದಕರೆ...ಆಗಿರಬೇಕು. ಆಗ ಟೂವೇ ಟ್ರಾಫಿಕ್ ಸಾಧ್ಯ.

ಇದಿಷ್ಟು ಪ್ರೊಲೋಗ್ ನೊಂದಿಗೆ ಮೇ ಅಪರಂಜಿ ಬಗೆಗೆ ಎರಡೇ ಎರಡು ಮಾತು. ಅರಾಸೇ ಅವರಿಂದ ಹಿಡಿದು, ವಿಕಟಕವಿ ಅವರವರೆಗಿನ ಎಲ್ಲ ಲೇಖನಗಳೂ ಲವಲವಿಕೆಯಿಂದ ಕೂಡಿವೆ. ಹಿಂದಿನ ಸಂಚಿಕೆಗೆ ಬಂದ ಪ್ರತಿಕ್ರಿಯಾತ್ಮಕ ಎರಡು ಲೇಖನಗಳು ಈ ಸಂಚಿಕೆಗೆ 'ದೃಷ್ಟಿಬೊಟ್ಟು' ಎಂದಿಟ್ಟುಕೊಳ್ಳಿ, ಫೇಂಡಾಗಳ ನಡುವೆ ಪ್ರವಾಸ ಚಿತ್ರಣ ಹಾಗೂ ಇದ್ಯಾಕೆ...? ಎರಡನ್ನೂ ಅಕ್ಕ ಪಕ್ಕ ಇರಿಸಿದ್ದರಿಂದ ಕೊಂಚ ಸೀರಿಯಸ್ಸು ಮತ್ತು ಲೈಟ್ ಲೇಖನಗಳು ಮನಸ್ಸಿಗೆ ಅಮರಿದವು.

Q C C :–ಇನ್ನು ಓದುಗರೊಂದಿಗೆ ಸಂವಾದದ ಬಗೆಗೆ ಹೇಳಬೇಕೆಂದರೆ, ಕಾರ್ಖಾನೆಗಳಲ್ಲಿ ಕ್ವಾಲಿಟಿ ಕೊಂಟ್ರೋಲ್ ಸರ್ಕಲ್ (Q C C) ಎಂಬ ಹೆಸರಿನ ಗುಣಮಟ್ಟ ನಿಯಂತ್ರಣ ವೃತ್ತಗಳು ಇರುತ್ತವೆ. ಯಾರು ಬೇಕಾದರೂ ಇಂತಹ ವೃತ್ತಗಳನ್ನ ಆರಂಭಿಸಬಹುದು ಮತ್ತು ಸದಸ್ಯರಾಗಬಹುದು. ವಸ್ತುವಿನ ಗುಣಮಟ್ಟ ವೃದ್ಧಿ

ಪಡಿಸುವುದು ಇಂತಹವೃತ್ತಗಳ ಮೂಲಭೂತ ಗುರಿಯಾಗಿದ್ದರೂ, ದೈನಂದಿನ ಹಲವಾರು ಸಮಸ್ಯೆಗಳಿಗೆ ಪರಿಹಾರ ಇಂತಹ ವೃತ್ತಗಳಿಂದ ದೊರಕುತ್ತದೆ.

BRAIN STORMING-: ಬ್ರೈನ್ ಸ್ಟಾರ್ಮಿಂಗ್ ಎಂಬ ಒಂದು ಚರ್ಚೆಯ ರೀತಿಯು ಸಂಭಾಷಣೆಗಳನ್ನು ಆರಂಭದಲ್ಲಿ ನಡೆಸಲಾಗುತ್ತದೆ. ಇದರಲ್ಲಿ ಯಾವುದೇ ಉದ್ದೇಶ, ಗುರಿ, ಇಟ್ಟುಕೊಳ್ಳದ ಹಲವರು ಕೂತು ಸುಮ್ಮನೆ ಮಾತನಾಡುತ್ತಾ ಹೋಗುತ್ತಾರೆ. ಈ 'ಸುಮ್ಮನೆ ಮಾತನಾಡುವಾಗ ಎಂತೆಂತಹ ಹೊಸ ಐಡಿಯಾಗಳು ಜನ್ಮತಾಳುತ್ತವೆ ಎಂಬುದನ್ನು ಕೂತೇ ಅರಿಯಬೇಕು. ಮುಂದೆ ಹೊಸ ಅವಿಷ್ಕಾರಗಳಿಗೆ, ಈಗಿರುವ ವ್ಯವಸ್ಥೆಯ ಬದಲಾವಣೆಗೆ ನ್ಯೂನತೆಗಳ ನಿವಾರಣೆಗೆ, ಇಂತಹ ಬ್ರೈನ್ ಸ್ಟಾರ್ಮಿಂಗ್ ಸೆಷನ್‌ಗಳು ಸಹಾಯ ಮಾಡುತ್ತದೆ. 'ಅಪರಂಜಿ ಈಗ ಇಂತಹ ಬ್ರೈನ್ ಸ್ಟಾರ್ಮಿಂಗ್ ಸೆಷನ್‌ಗೆ ದಾರಿ ಮಾಡಿಕೊಟ್ಟಿದೆ ಎಂದು ನನ್ನ ಅನಿಸಿಕೆ, ಇದನ್ನ ಹೇಳುವಾಗ ಒಂದು ತಮಾಷೆ ಪ್ರಸಂಗ ನೆನಪಿಗೆ ಬರುತ್ತೆ.

ಕ್ಯಾಂಟೀನ್-ಪ್ಯಾಂಟೀನ್

ಕೇಂದ್ರೋದ್ಯಮದ ಕಾರ್ಖಾನೆಗಳು ಅಂದರೆ ಗೊತ್ತಲ್ಲ. ನೂರಾರು ಎಕರೆ ಜಮೀನುಗಳಲ್ಲಿ ಉದ್ದಗಲಕ್ಕೂ ಹರಡಿರುವ ಕಟ್ಟಡಗಳಲ್ಲಿ ನಡೆಸಲಾಗುವ ಕಾರ್ಖಾನೆಗಳು ಇವು. ಹತ್ತು ಹದಿನೈದು ಸಾವಿರ ಜನ ಕೆಲಸಮಾಡುವ ಕಾರ್ಖಾನೆಗಳೂ ಇರುವ ಬೆಂಗಳೂರಿನ ಒಂದು ಕಾರ್ಖಾನೆಯಲ್ಲಿ ನಲವತ್ತು ಸಾವಿರ ಉದ್ಯೋಗಿಗಳೂ ಇದ್ದಾರಂತೆ. ಇಂತಹ ಒಂದು ಹತ್ತು ಸಾವಿರ ಜನ ಕೆಲಸ ನಿರ್ವಹಿಸುವ. ರಕ್ಷಣಾ ಉತ್ಪಾದನೆಗಳನ್ನು ತಯಾರಿಸುವ ಕೇಂದ್ರೋದ್ಯಮದಲ್ಲಿ ನಾನೂ ಒಬ್ಬ ಉದ್ಯೋಗಿ. ದೊಡ್ಡ ದೊಡ್ಡ ಗೇಟುಗಳನ್ನು ದಾಟಿ, ಸೆಕ್ಯೂರಿಟಿಗಾರ್ಡ್‌ಗಳ ಬಳಿ ನಮ್ಮ ನಮ್ಮ ಗುರುತಿನ ಚೀಟಿ ತೋರಿಸಿ, ಕಾರ್ಖಾನೆ ಒಳ ಹೊಕ್ಕ ಕೂಡಲೇ ನಮ್ಮೆದುರು ಎದ್ದುಕಾಣುವುದು ನಮ್ಮ ಕಾರ್ಖಾನೆ ಕ್ಯಾಂಟೀನ್. ಮನುಷ್ಯನಿಗೆ, ಅದರಲ್ಲೂ ಪ್ರೊಲಿಟೇರಿಯಟ್ ಜಾತಿಯ ಮನುಷ್ಯನಿಗೆ ಮೊದಲು ಹೊಟ್ಟೆಚಿಂತೆಯಂತೆ! ಅದರಿಂದ ಮೊದಲು ನಮ್ಮ ಕ್ಯಾಂಟೀನ್‌ಗೂ ಹಾಗೂ ನಮಗೂ ಸಂಬಂಧಿಸಿದ ಒಂದು ಸಣ್ಣ ಸಮಸ್ಯೆ ಹೇಗೆ ಪರಿಹಾರ ಕಂಡು ಕೊಂಡಿತು ಎಂಬುದರಿಂದ ಈ ಕತೆ ಆರಂಭಿಸಲೇ ?

ಒಂದು ಸಮಸ್ಯೆ ;– ಕಾರ್ಖಾನೆ ಕ್ಯಾಂಟೀನ್‌ಗಳು ಅಂದರೆ, ಒಟ್ಟಿಗೆ ಒಂದೇ ಬಾರಿಗೆ ನಾಲ್ಕೈದು ಸಾವಿರ ಜನ ಕೂತು ಊಟಮಾಡುವ ಜಾಗ. ಅರ್ಧಘಂಟೆಯಲ್ಲಿ ಈ

ಜನ ಒಂದು ಊಟವಾಗಿಸಿ, ಮತ್ತೆ ತಮ್ಮ ಕೆಲಸದ ತಾಣಕ್ಕೆ ಓಡುವಂತೆ ಇದರ ನಿಯಂತ್ರಣ ವಿರುತ್ತದೆ. ಹೀಗೆ ಜನ ಸೈರನ್ ಆದ ಕೂಡಲೇ ಕ್ಯಾಂಟೀನ್ ಗೆ ನುಗ್ಗುತ್ತಾರೆ. ದೊಡ್ಡ ದೊಡ್ಡ ಬಾಗಿಲುಗಳನ್ನು ಹೊಂದಿರುವಂತಹ ಐದು ಆರು ಕಟ್ಟಡಗಳು ಈ ಕ್ಯಾಟರಿಂಗ್ ವ್ಯವಸ್ಥೆಯು ಪೂರೈಕೆಗಾಗಿಯೇ ಸೃಷ್ಟಿಸಲ್ಪಟ್ಟಿದೆ. ಇಪ್ಪತ್ತು ಇಪ್ಪತ್ತೈದು ವರುಷದಿಂದ ಈ ತೆರೆದ ಬಾಗಿಲುಗಳ ಮೂಲಕ ಕೆಲಸಗಾರರ ಸಂಗಡ ಕಾಗೆಗಳೂ ಕ್ಯಾಂಟೀನ್ ಗೆ ನುಗ್ಗುವ ಅಭ್ಯಾಸ ಬೆಳೆಸಿಕೊಂಡಿವೆ. ಅದರಲ್ಲೂ ಕೆಲವು ತುಂಟಕಾಗೆಗಳು ಕಾರ್ಮಿಕರ ಸಂಗಡ ಪೈಪೋಟಿ ನಡೆಸಿ. ಅವರ ತಟ್ಟೆಗೇ ಬಾಯಿ ಹಾಕುವ ಸಾಹಸವನ್ನೂ ನಡೆಸುತ್ತವೆ. ಮತ್ತೆ ಕೆಲವು ಅತ್ತಿತ್ತ ಹಾರಾಡುವಾಗ ತಿರುಗುತ್ತಿರುವ ಸೀಲಿಂಗ್ ಫ್ಯಾನ್‌ಗಳಿಗೆ ಸಿಕ್ಕಿ ಅಲ್ಲೇ ಹರಾಕಿರಿ ನಡೆಸಿಕೊಳ್ಳುವುದೂ ಉಂಟು. ಹರಾಕಿರಿಗೆ ಒಳಗಾದ ಕಾಗೆಗಳ ಅವಶೇಷ ಕೆಲಸಗಾರರ ತಟ್ಟೆಗೆ ನೇರ ಬಂದು ಬಿದ್ದು ಒಂದು ರೀತಿಯ ಅಸಹ್ಯವಾತಾವರಣವನ್ನು ಇಡೀ ಕಾರ್ಖಾನೆಯಲ್ಲಿ ಸೃಷ್ಟಿಸಿರುತ್ತಿತ್ತು. 'ಎರಾಡಿಕೇಷನ್ ಆಫ್ ಕ್ರೊಸ್ ಇನ್ ಕ್ಯಾಂಟೀನ್' ಸಮಸ್ಯೆ ಬಗೆಹರಿಸಲು ಒಂದು ವೃತ್ತ ತಯಾರಾಯಿತು. ಬ್ರೈನ್ ಸ್ಟಾರ್ಮಿಂಗ್ ನಂತರ ಬಂದ ಸೂಚನೆಗಳು ಸಾವಿರಾರು. ಅವುಗಳಲ್ಲಿ ಕೆಲವು ಇಂಪ್ಲಿಮೆಂಟ್ ಸಹಾ ಆದವು. ಅವೆಂದರೆ (1) ಕ್ಯಾಂಟೀನ್ ಬಾಗಿಲ ಬಳಿ ಒಬ್ಬರು ನಿಂತು ಕಾಗೆಗಳಿಗೆ ಪ್ರವೇಶ ನಿರಾಕರಿಸುವುದು. (2) ಮೆಷ್ ಬಾಗಿಲನು ಆರಡಿ ಎತ್ತರದಲ್ಲಿ ನಿರ್ಮಿಸಿ ಬಾಗಿಲಿಗೆ ಅಡ್ಡವಿಟ್ಟು ಕಾಗೆಗಳ ನಿಯಂತ್ರಣ. (3) ಬಲೆ ಹರಡಿ ಕಾಗೆಗಳನ್ನು ಹಿಡಿಯುವುದು. (4) ಕಾಗೆಗಳನ್ನು ಓಡಿಸಲು ನಾಯಿ ಸಾಕುವುದು......ಹೀಗೆ.

FLOP-FLOP

ಮೊದಲನೇ ಕಾರ್ಯಕ್ರಮ ಯಶಸ್ವಿಯಾಗಲಿಲ್ಲ, ಕಾರಣವೆಂದರೆ ಬಾಗಿಲ ಬಳಿ ನಿಂತಾತ ಒಂದು ನಿಮಿಷ ಅತ್ತಿತ್ತ ಚಲಿಸಿದರೆ, ಕಾಗೆಗಳ ಅಕ್ರಮಣ ನಡೆಯುತ್ತಿತ್ತು, ಅಲ್ಲದೇ ಹನ್ನೆರಡು ಬಾಗಿಲುಗಳನ್ನು ಕಾಯಲು ಹನ್ನೆರಡು ಜನರ ಸೇವೆ ಅಗತ್ಯ ಅವರು ರಜಾ ಹಾಕಿದರೆ ಅವರಿಗೆ ರಿಪ್ಲೇಸ್‌ಮೆಂಟ್ ಅಗತ್ಯ. ಈ ಸಲಹೆ ಕಾರ್ಯ ಸಾಧುವಲ್ಲವೆಂದು ನಂತರ ಕೈ ಬಿಡಲಾಯಿತು.

ಎರಡನೇ ಸಲಹೆ ಸಹ ಮೆಷ್ ಬಾಗಿಲ ನಿಯಂತ್ರಣ ಸಾಧ್ಯವಾಗದ್ದು ಮತ್ತು ಕಾಗೆಗಳು ಕಿಟಕಿ ಮೂಲಕ ಸಹಾ ನುಗ್ಗುವ ಸಾಧ್ಯತೆ ಇದ್ದದ್ದರಿಂದ ಅನುಪಯುಕ್ತವಾಯಿತು.

ಬಲೆ ಹರಡಿ ಕಾಗೆಗಳನ್ನು ಹಿಡಿಯುವ ಯೋಜನೆ. ಸರಿಯಾದ ನುರಿತ ಬೇಟೆಗಾರರು ಬೆಂಗಳೂರಿನಲ್ಲಿ ಸಿಗದಿದ್ದರಿಂದ Flop ಆಯಿತು.

ಕಾಗೆಗಳನ್ನು ಓಡಿಸಲು ನಾಯಿಗಳನ್ನು ಸಾಕುವ ಸಲಹೆ ಕಾರ್ಯಗತವಾದದ್ದು ಮತ್ತು ನಾಯಿ ನಿಯಂತ್ರಣಕ್ಕೆ ಕಾರ್ಪೊರೇಷನ್ ಮೊರೆ ಹೋಗಿದ್ದು, ಒಂದು ನಾಯಿ ಕಾರ್ಮಿಕನೊಬ್ಬನನ್ನು ಕಚ್ಚಿ ಅದೇ ದೊಡ್ಡ ಔದ್ಯೋಗಿಕ ವಿವಾದವಾಗಿದ್ದು ನಂತರದ ಕತೆ.

ಕಾಗೆ ನಿಯಂತ್ರಣಕ್ಕೆ ಈಗ ನಿಜವಾಗಿ ಬುದ್ಧಿ ಓಡಿಸಲೇ ಬೇಕಾದ ಕ್ರಮ ಅನಿವಾರ್ಯವಾದಾಗ ಮತ್ತೆ ಮತ್ತೆ ವೃತ್ತಗಳು ಸೇರಿದವು. ಸ್ಟಾರಿಂಗ್ ಸೆಕ್ಷನ್ ನಡೆಸಿದವು. ಕಾಗೆಗಳಳನ್ನು ಕುರಿತಂತೆ ಹಲವಾರು ಗ್ರಂಥಗಳನ್ನು ಪಠಿಸಲಾಯಿತು.

ಜಯಭೇರಿ

ಕೊನೆಗೂ ಕಾಗೆ ನಿಯಂತ್ರಣಕ್ಕೆ ಒಂದು ದಾರಿ ಗೊತ್ತಾಗಿ ಹೋಯಿತು. ಬಾಗಿಲಿಗೆ ಮೆಷ್ ಕವರು ಕಾವಲುಗಾರ, ನಾಯಿ ಇವುಗಳ ಸಹಾಯವಿಲ್ಲದೇ ಈ ನಿಯಂತ್ರಣ ಹೇಗೆ ಸಾಧ್ಯವಾಯಿತು ? ಕ್ಯಾಂಟೀನಿನ ದೊಡ್ಡ ದೊಡ್ಡ ಬಾಗಿಲಿಗೆ ಬಣ್ಣ ಬಣ್ಣದ ಬಟ್ಟೆ ಪಟ್ಟಿಗಳನ್ನ ಕರ್ಟನ್ ರೀತಿ ನೇತು ಹಾಕಲಾಯಿತು. ಕಾಗೆಗಳು ತಾವು ಇದರಲ್ಲಿ ನುಸುಳ ಬಹುದು ಎಂದು ಅರಿಯಲು ಆಗದ್ದರಿಂದ ಅವು ಕ್ಯಾಂಟೀನಿಗೆ ನುಗ್ಗುವುದು ತಪ್ಪಿತು ! ಅವುಗಳ ಹರಾಕಿರಿ ತಪ್ಪಿತು ! ಮಡಿವಂತರು ಆರಾಮವಾಗಿ ಕೂತು ಊಟ ಮುಗಿಸಿದರು. ತಟ್ಟೆಗೆ ಕಾಗೆ ಪುಕ್ಕ ಬೀಳುವ ಚಿಂತೆ ಬಹು ದೂರ ಓಡಿತು ! !

"ಅಪರಂಜಿ" ಈಗ ಬ್ರೈನ್ ಸ್ಟಾರ್ಮಿಂಗ್ ಸೆಷನ್‌ನಲ್ಲಿ ಅಡಿ ಇಟ್ಟಿದೆ. ಬಹುಶಃ ಇದೇ ತೆರನಾದ ಸ್ಟಾರ್ಮಿಂಗ್‌ಗಳಿಂದಾಗಿ ನಮ್ಮ ಹಾಸ್ಯ ಸಾಹಿತ್ಯಕ್ಕೆ ಅನುಪಮ ಕೊಡುಗೆಯನ್ನೂ ನೀಡ ಬಹುದಾದ ಸಾಧ್ಯತೆ ಹೊಂದಿದೆ. ಆ ದಿನ ಬೇಗ ಬರಲಿ !

ನಗೆ ಹಾನಿ

ಬಿ. ನ. ನರಹರಿ

"ಅಪರಂಜಿ" ಬಳಗದ ಕೂಟಗಳು ಜರುಗಿ ಅನೇಕ ತಿಂಗಳುಗಳೇ ಉರುಳಿವೆ. ಆಗ ಸವಿದ ಹಾಸ್ಯ ರಸಾಯನ, ಐ. ಎಸ್. ಒ. 9000 ಸರಣಿಮಟ್ಟದ ಒತವಾದ ಮಿನಿ ಮೀಲ್. ತಿಂಡಿ-ತಿನಿಸು ನೆನಪಿನಲ್ಲಿ ಭದ್ರವಾಗಿ ಉಳಿದಿದೆ. ಇಳಿವಯಸ್ಸಿನಲ್ಲಿ ಇದು ನನ್ನ ಅನುಭವವಾದರೆ. ನನ್ನ ಶ್ರೀಮತಿಯ ಮೇಲೆ ಕೂಟ ಬೀರಿರುವ ಪ್ರಭಾವ ಬೇರೆ ರೀತಿಯದು. ಅವಳ ಸುಪ್ತ ವಿಚಿತ್ರ ಹಾಸ್ಯ ಪ್ರಜ್ಞೆ ಚಿಗುರಿದೆ. 'ಧ್ವನಿ ಸ್ವಿಚ್' ಹಾಕಿದ ತಕ್ಷಣ ಹಾಸ್ಯದ ಕಿಡಿ ಹಾರಿ ಹರೆಳೆಣ್ಣೆ ನಗೆ ಸುತ್ತಲೂ ಚಿಮ್ಮುವುದು ಖಂಡಿತ. ವಾತಾವರಣ ತಂಪಾಗುವ ಬದಲು 30-40ಡಿಗ್ರಿ ಸೆಲ್ಸಿಯಸ್ ಲಿ ಚುರುಕು ಮುಟ್ಟಿಸುತ್ತದೆ.

ಆ ಹಾಸ್ಯ ಸಮಾವೇಶಗಳನ್ನು ಮುಗಿಸಿಕೊಂಡು ಬಂದ 2 ವಾರಗಳಲ್ಲೆ ಶುರು ವಾಯಿತು, ಅವಳ ವಿಚಿತ್ರ ಹಾಸ್ಯ ತುಂಬಿದ ಕಾಪ್ಸೂಲ್, ಗುಳಿಗೆಗಳ ಧಾಳಿ. ಅವಳು ತನ್ನ ಬೊಚ್ಚು ಬಾಯಿಂದ ಆಗಾಗ್ಗೆ ಉದುರಿಸಿದ ಹಲವು ಮುತ್ತಿನ ಗುಳಿಗೆಗಳು ಇವು. ಗುಳಿಗೆ 1 : ಪಕ್ಕದ ಬೀದಿ ಪಂಕಜಮ್ಮನವರ ಮಾತು ಯಾವಾಗಲೂ ಮನೆಯ ಖಾಯಿಲೆ, ಕಸಾಲೆ ಬಗ್ಗೇನೆ. ಸದಾ ಡಯಾಬಿಟೀಸ್, ರಕ್ತದಲ್ಲಿ ಸಕ್ಕರೆ ಅಂಶ ಏರಿದ್ದು, ಬಿ. ಪಿ. ವ್ಯತ್ಯಾಸಗಳು, ತೆಗೆದುಕೊಳ್ತಿರೋ ಅಲೋಪಥಿಕ್, ಆಯುರ್ವೇದಿಕ್, ಹೊಮಿಯೋಪಥಿ, ಯುನಾನಿ ಔಷಧಿಗಳು, ಅವುಗಳ ಪಥ್ಯ, ವಾಟರ್ ಥೆರಪಿ, ಮ್ಯಾಗ್ನೆಟೋ ಥೆರಪಿ ವಿಷಯಗಳೇ, ಕೇಳಿ ಕೇಳಿ ಸಾಕಾಗಿ ನನ್ನವಳು ಒಂದೇ ಉಸಿರಿನಲ್ಲಿ ಹೇಳೇ ಬಿಟ್ಟಳಂತೆ, "ಡಯಾಮೀಟರ್ ಜಾಸ್ತಿಯಾದರೆ ಡಯಾಬಿಟೀಸ್ ಗ್ಯಾರಂಟಿ ಅಂತೆ. ನಿಮಗೆಲ್ಲ ಶುಗರ್ ಜಾಸ್ತಿಯಾಗಿದ್ರೆ ರೇಷನ್‌ಕಾರ್ಡ್ ಸಕ್ಕರೇನ ನಿಮಗೆ ತುಂಬಾ ಇಷ್ಟವಾದೋರಿಗೆ ಕೊಟ್ಬಿಟು ಶುಗರ್ ಕಡಿಮೆ ಮಾಡ್ಕೊಂಡು ನೀವಾಕೆ ಹಾಯಾಗಿರ್ಬಾರ್ದು ?"

ಅಂದಿನಿಂದ ಪಂಕಜಮ್ಮ ಪತ್ತೇನೆ ಇಲ್ಲ, ನಮ್ಮ ಮನೆ ಬಳಿ.

ಗುಳಿಗೆ 2 ; ರಸ್ತೇಲಿ 'ನೋಪಾರ್ಕಿಂಗ್' ಸ್ಥಳದಲ್ಲಿ ಖಾಯಂ ಆಗಿ ನಿಂತಿರುವ ಚಕ್ರವಿಲ್ಲದ ತರಕಾರಿಕೈಗಾಡಿ ಬಳಿ ಇವಳಿಗೆ ಪರಿಚಯವಾದರು ಮತ್ತೊಬ್ಬಾಕೆ. ಆಕೆಯ ಪತಿ "ಬೋರ್‌ವೆಲ್ ಕಂಪ್ನಿ ಮಾಲೀಕರಂತೆ. ಉದ್ಯಮದ ಕಷ್ಟ, ಇದುವರೆವಿಗೆ ಆಗಿರುವ ಬರಿ ನಷ್ಟ, ಸರ್ಕಾರದ ಬಾಕಿ ಹಣದ ಬಗ್ಗೆ ಒಂದೇ ಸಮ ನೂರಾರು ಮೀಟರ್ ಕೊರೆಯುತ್ತಿದ್ದರು. ನಿತ್ಯ ತಲೆ ಚಿಟ್ಟು ಹಿಡಿದು

ಇವಳು ಹೇಳಿದು, ಬೋರ್ ವೆಲ್ ಕಂಪ್ನಿ ಅಂತ ಈಗಿರೋ ಹೆಸರ್ನ 'ಬೆಸ್ಟ್ ಬೋರ್ ಕಂಪ್ನಿ' ಎಂದು ತಕ್ಷಣ ಬದಲಾಯಿಸಿಕೊಳ್ಳಿ, ಅದೃಷ್ಟ ಖುಲಾಯಿಸಿ ಸರ್ಕಾರಿ ಖಜಾನೇನ ಕೊರೀಬಹುದು"

ಅವರು ಗುಳಿಗೆ ನುಂಗಿದರೋ ಬಿಟ್ರೋ ಗೊತ್ತಿಲ್ಲ. ಅಂತೂ, ಆಕೆ ಈಗ ಆ 'ನೋಪಾರ್ಕಿಂಗ್' ಸ್ಥಳದಲ್ಲಿ ತರಕಾರಿಗಾಡಿ ಬಳಿ ಕಾಣಿಸ್ತಿಲ್ಲ.

ಗುಳಿಗೆ 3 : ಒಂಬೈನೂರ್ರೈವತ್ತೆರಡು ಸೆಂಟಿಮೀಟರ್ ದೂರದ ನೆಂಟರ ಪೈಕಿ ಒಬ್ಬರು ಬೃಹತ್ ಗಾತ್ರದ, ಖಾಸಗಿ ಸದಾಸಿಕ್ ಕಂಪ್ನಿ ಛೇರ್ಮನ್. ಬಂಡವಾಳದಲ್ಲಿ, ಸ್ವಂತ 5 ಭಾಗ, 60 ಭಾಗ ಸರ್ಕಾರದ ಸಾಲ, ಮಿಕ್ಕಿದ್ದು ವರ್ಕರ್ಸ್ ಪ್ರಾವಿಡೆಂಟ್ ಫಂಡ್ ಹಣದಲ್ಲಿ ಮಜಬೂತಾಗಿದ್ದ ಕಂಪ್ನಿ. ಛೇರ್ಮನ್, ಆಫೀಸಿನ ಚೇರ್ ಲಿ ಕೂರ್ತಾನೇ ಇರ್ಲಿಲ್ಲ. ಸದಾ ಕಾರಿನಲ್ಲೋ, ವಿಮಾನದಲ್ಲೋ ಅಥವ ಪಂಚತಾರಾ ಹೋಟೆಲಿನಲ್ಲಿ ಇರೋರು. ಅವರೊಮ್ಮೆ ನಮ್ಮ ಮನೆಗೆ ಬರಲೇಬೇಕಾಯ್ತು. ಬಂದಾಗ ನನ್ನ ಶ್ರೀಮತಿಗೆ "ಹದಿನೈದು ದಿನಗಳಿಂದ ಬರಬೇಕೂಂತಿದ್ದೆ. ಕೆಲಸದ ಅವಾಂತರದಲ್ಲಿ ಸಾಧ್ಯವೇ ಆಗಲಿಲ್ಲ. ಅರ್ಜೆಂಟಾಗಿ ಬೆಂಗಳೂರಿಗೆ ಬರಬೇಕಾಗಿತ್ತು, ಮದ್ರಾಸಿಗೆ ಹೋಗಿದ್ದಾಗ, ಅಲ್ಲಿಂದ ಬೆಂಗಳೂರಿಗೆ ಪ್ಲೇನ್, ರೈಲು ಟಿಕೆಟ್ ಸಿಗಲಿಲ್ಲ. ಮುಂದಿನ 5ವರ್ಷಕ್ಕೆ ರಿಸರ್ವ ಆಗಿ ಬಿಟ್ಟಿದೆಯಂತೆ. ಬೇರೆ ದಾರಿ ಇಲ್ಲದೆ, ದೆಹಲಿ, ಲಂಡನ್, ನ್ಯೂಯಾರ್ಕ್, ಬೊಂಬಾಯಿ ಸುತ್ಕೊಂಡು ಬಂದಿದ್ದಾಯ್ತು" ಅಂತ ಒಣ ದೊಡ್ಡಸ್ತಿಕೆ ರೈಲು ಬಿಟ್ಟಾಗ, ಬಿಡ್ತಾಳೆಯೆ ಇದಳು ?

ತಕ್ಷಣ ರಬ್ಬರ್ ಬುಲೆಟ್‌ನಲ್ಲಿ ಗುಳಿಗೆ ಉಡಾಯಿಸಿದಳು. ಅವರಿಗೆ. "ನೀವು ಆಫೀಸಿಗೆ ಒಂದ್ಸಾರ ಪೂರ್ತಿ ಸರಿಯಾಗಿ ಹಾಜರಾದರೆ, ವರ್ಕರ್ಸ್ ಖಂಡಿತ 'ಶ್ರಮ ವೀರ ಪ್ರಶಸ್ತಿ ವಿತ್ ಅಟೆಂಡೆನ್ಸ್ ಬೋನಸ್ ಕೊಟ್ಟು ಸನ್ಮಾನ ಮಾಡ್ತಾರೆ."

ಆ ಡೋಸ್ ಪರಿಣಾಮ ? ಕಂಪ್ನಿಗೆ ಈ ವರ್ಷ ಲಾಭ ಬರಬಹುದಂತೆ. ಹಾಗಂತಾರೆ, ಷೇರ್ ಮಾರ್ಕೆಟ್ ಬುಲ್‌ಗಳು 'ವೀಕ್ಲಿಸ್ಕ್ಯಾಮ್ ನ್ಯೂಸ್ ಲಿ,

ಗುಳಿಗೆ 4 : ಶ್ರೀ ಸತ್ಯನಾರಾಯಣ ಪೂಜೆ ಮುಗಿದು ಪುಷ್ಕಳವಾಗಿ ಊಟವಾಗಿತ್ತು. ಮನೆ ಮಂದಿ ಎಲ್ಲರೂ ಹರಟ್ತಿದ್ದಾಗ ಶುರುವಾಯಿತು, ಸಮಸ್ಯೆ-ವಾಗ್ವಾದ, ಹೆಂಗಸರಿಗೆ 'ಶ್ರೀಮತಿ' ಎಂದು ಹೇಗೆ ರೂಢಿಗೆ ಬಂತು ಅಂತ. ಬಹಳಗಹನವಾದ ವಿಷಯ. ಪಟ್ಟಾಗಿ ಉಂಡು ತುಂಬಾ ಆಯಾಸವಾಗಿದ್ದರೂ ನಿರಾಳವಾಗಿ ವ್ಯಾಖ್ಯಾನ ಮಾಡಿದಳು, ನನ್ನ ಶ್ರೀಮತಿ.

"ಹಿಂದೆಲ್ಲ ಶ್ರೀ ಶ್ರೀಮತಿ ಅಂತೆಲ್ಲ ವ್ಯತ್ಯಾಸ ಇರ್ಲಿಲ್ಲ. ಈ ಚೀಚೆಗೆ ಗಂಡಸರು ಹೇಗೋ ಓದಿ ಪ್ಯಾಸ್ ಮಾಡಿ ಕೈ ಹಿಡಿದವರ ಹಸ್ತಗುಣದಿಂದ ಕೆಲ್ಸ, ಹಣ ಏನೋ ಸಂಪಾದಿಸ್ತಾರೆ. ಆದರೆ ಗಳಿಸಿದ್ದನ್ನ ವಿತರಣೆಯಾಗಿ ಬಳಸಕ್ಕೆ, ವಿವೇಚನೆಯಿಂದ ಉಳಿಸಕ್ಕೆ ಗಂಡಸರಿಗೆ ಮತಿ ಇಲ್ಲ. ಅದಕ್ಕೆ ಆಕೆಲ್ಸ ಹೆಂಗಸರಿಗೇ ಬಿಟ್ಟುಕೊಡ ಬೇಕಾಯ್ತು. ಅನಾದಿ ಕಾಲದಿಂದ ಹೀಗಾಗಿ ಅವರನ್ನು 'ಶ್ರೀಮತಿ' ಎಂದು ಗೌರವ ವಾಗಿ ಕರೆದ ಬ್ರಹ್ಮ ಶ್ರೀ. ಗಂಡಸರೆಲ್ಲರೂ ಖಾಲಿ 'ಶ್ರೀ' ಗಳಾದರು" ವೀಳ್ಯಮೆಲ್ಲು ತ್ತಿದ್ದ ಶ್ರೀಮತಿಗಳು ಹಿತವಾಗಿ ನಕ್ಕರು. ತೂಕಡಿಸುತ್ತಿದ್ದ ಭಾರಿ ತೂಕದ ಆಸಾಮಿ ಗಳೆಲ್ಲರ ಮುಖಗಳಲ್ಲಿ ಹರಳೆಣ್ಣೆ ನಗೆ ನಿಧಾನವಾಗಿ ಹರಡಿತು.

ಈ ರೀತಿಯ ಸಿಹಿ-ಕಹಿ ಲೇಪಸದ ವಿವಿಧ ಕಲಬೆರಕೆ ಕ್ಯಾಪ್ಸೂಲ್ ಗುಳಿಗೆಗಳ ಸರಕು ಅವಳ ಕಾಲಿನ ಹತ್ತು ಬೆರಳುಂಗುರಗಳಿಂದ ತಲೆ, ಅಲ್ಲ ಚೌರಿಯ ಹೇರ್ ಬಾಂಡ್‌ನವರೆಗೆ ಪ್ಲಸ್‌ಕಾಂಟಂಕ್ಟ್‌ಲೆನ್ಸ್, ಕೃತಕದಂತಾವಳಿ ನಡುವೆ ನನ್ನ ಪರ್ಸ್ ಜೊತೆ ಆವಳ ವ್ಯಾನಿಟಿಬ್ಯಾಗ್ ಲಿ ಭರ್ತಿ ಇವೆ. ಅವುಗಳ ಬಗ್ಗೆ ಹೆಚ್ಚು ಬರೆದರೆ ನನಗೇ ಕಷ್ಟ, ನಷ್ಟ. ಆವಳಿಗೆ ಅಪ್ರಿಯವಾಗಿ ಪ್ರಿಯದರ್ಶಿನಿ ಅಪ್ಪಟ ರೇಷ್ಮೆ ಸೀರೆ ವಿತ್ ಬಂಗಾರಪದಕದ ದಂಡ ಬೀಳಬಹುದೆಂಬ ಭಯ ನನಗೆ.

ಪರೀಕ್ಷೆಗೆ.........

ಎಷ್ಟು ಮಲಗಿದರೂ ನನಗೆ
ಬರಲೇ ಇಲ್ಲ ನಿದ್ದೆ
ಕಾರಣ ನನ್ನ ಮನಸಿನ
ತುಂಬಾ ನೀ ನಿದ್ದೆ

ಬಸವರಾಜ್

ಹುಚ್ಚನ್ ಮಾತು

ಶ್ರೀಮತಿ ಅರುಣಾ ಆರ್. ಕಾರಂತ

ಹುಚ್ಚನ ಮಾತ್ ಕೇಳಿ ರೊಚ್ಚಿಗ್ಯಾರ್ ಏಳ್ತಾರ ಚುಚ್ತವದ ಅವ್ರವ್ರಿಗೆ ಅಂದ್ರು ಬೇಂದ್ರೆ. ಆದ್ರೆ ಜಗತ್ತಿನೊಳ್ಗ ಖರೆ ಹುಚ್ಚ ಯಾರು ಅನ್ನೂದೆ ಸಮಸ್ಯೆ, ಒಬ್ರನ್ನ ಒಬ್ರು ಅವನಿಗೆ ತಲೆ ಸರಿಯಿಲ್ಲ, ತಲೆ ಕೆಟ್ಟಿದೆ ಅನ್ಕೋತ ಸಮ್ಧಾನ ಪಟ್ಕೋಕ್ಕೊದ್ ನೋಡಿದ್ರೆ ತಲೆ ಕೆಟ್ಟಿದ್ಯಾರಿಗೆ ಅನ್ನೊ ಸಮಸ್ಯೆ ಆರಂಭವಾಗಿ ಯೋಚಿಸ್ತಾ ಹೋದಂತೆ ಸಮಸ್ಯೆ ಗೋಜಲು ಗೋಜಲುಗಳಾಗಿ ಯೋಚಿಸುವವರೇ ತಮ್ಮಲ್ಲೇ ಏನೋ ಸರಿಯಿಲ್ಲ ಅನ್ನೊ ಸತ್ಯ ಕಂಡ್ಕೋಳ್ತಾರೆ, ಮತ್ತೆ ಹಾಂಗs ಯೋಚಿಸೋದನ್ನ ಬಿಟ್ಟು ತಮ್ಮಂಥ ಶ್ಯಾಣ್ಯಾರೇ ಇನ್ನೊಬ್ರಿಲ್ಲ ಅಂತ ಅಂದ್ಕೋತಾರ.

ನೂರಕ್ನೂರು ಈ ಜಗತ್ತಿನಲ್ಲಿ ಬರೋಬ್ಬರಿ ಇರೊ ಮನುಷ್ಯಾ ಅಂತ ಇದ್ರೆ ಅದು ಮುಗ್ಧ ಶಿಶು ಮಾತ್ರ, ಅದು ಯಾವಾಗ ಇದ್ ನನ್ನವ್ವ, ಇದ್ ನನ್ನಪ್ಪ, ಇವ್ರ್ ಬೇರೆ ಅಂತ ಗುರತಿಸಲಿಕ್ಕೆ ಹತ್ತಿತೊ ಅಲ್ಲಿಗೆ ಮುಗೀತು ಅದರ ಸಾಚಾತನ, ಶುರುವಾಯ್ತು ಮುಖವಾಡ ಧರಿಸೊ ನಟನಾ, ಆದ್ರೆ ಅಂತಹ ಸಾಚಾ ಮನುಶ್ಯಾರು ಇಲ್ಲ್ಯೆ ಇಲ್ಲಂದಲ್ಲ. ಇದ್ದಾರ, ಅದ್ರ ಅವ್ರನ್ನ ನಾವು ನೀವು ಯಾರೂ ಸರಿ ಇದ್ದಾರ ಅಂತ ಒಪ್ಕೊಳ್ಳೊದಿಲ್ಲ, ಅವ್ರನ್ನ ಈ ಜನ್ರ ಮಧ್ಯೆ ಇಲ್ರಿಕ್ಕೇ ನಾಲಾಯಕ್ಕು ಅಂತ ಅಂದ್ಬಿಡ್ತೇವೆ.

ನಾವು ಶಿಕಾರಿಪುರ ತಾಲೂಕಿನ ತೊಗರ್ಸಿಯಲ್ಲಿದ್ದಾಗ ಅಲ್ಲೊಬ್ಬ ಹುಚ್ಚ ಮಾಸ್ತರ ಇದ್ದ. ಭಾಳ ಶಿಸ್ತಿನ ಮನುಷ್ಯಾ, ಯಾರ ಬಳಿಯೂ ತಾನಾಗಿಯೇ ಮಾತಾಡ್ತಿರಲಿಲ್ಲ, ಅವಶ್ಯಕತೆಗಿಂತ ಹೆಚ್ಚು ಯಾರೇ ಹಣ ಕೊಟ್ಟರೂ ತಕ್ಕೊಳ್ತಿರಲಿಲ್ಲ, ಅವನಿಗೆ ಬರೆಯೋ ಹುಚ್ಚು, ಯಾರ್ ಬಳಿಯಾದ್ರೂ ರೊಕ್ಕ ಕೇಳಿದರೆ ಸೀಮೆ ಸುಣ್ಣ ಕೊಳ್ಳಲಿಕ್ಕೆ ಮಾತ್ರ, ಅವನಿಗೆ ಬರೆಯಲಿಕ್ಕೆ ಪಾಟಿ, ಕರಿ ಹಲಗೆ, ಹಾಳೆ ಯಾವ್ರದೂ ಬೇಕಿಲ್ಲ, ಡಾಂಬರ್ ಹಾಕಿದ ರಸ್ತೆ, ರಸ್ತೆ ಬದಿಯಿರೋ ಕಟ್ಟಡದ ಗೋಡೆ ಕಾಂಪೌಂಡಿನ ಗೋಡೆ ತಂಗುದಾಣದೊಳಗಿನ ಗೋಡೆ ಇಷ್ಟಿದ್ರೆ ಸಾಕು, ಅಂವ ಇದ್ದಲ್ಲಿ, ಸೀಮೆ ಸುಣ್ಣ ತಗೊಂಡು ಅಂತಂತಹ ಗೋಡೆ ತುಂಬ ಬರೀತಿದ್ದ, ಚಿತ್ರಿಸ್ತಿದ್ದ, ಗಣಿತ

ಮಾಡ್ತಿದ್ದ, ವಿಶೇಷ ಅಂದ್ರೆ ಅಕ್ಷರ ತೀಡ ಇಟ್ಕಾಂಗಿದ್ರೂ ಭಾಷೆ ಆಡು ಭಾಷೆ. ನಾವು ಹೇಗೆ ಉಚ್ಚ ರಿಸ್ತೇವೋ ಹಾಗೆ ಅಲ್ಪ ಪ್ರಾಣ, ಮಹಾ ಪ್ರಾಣ ಎಲ್ಲಾ ಬರೀತಿದ್ದ ಆತ ಹುಚ್ಚ ಇದ್ದದ್ದಕ್ಕೆ ಯಾರೂ ಅವನ್ನ ಅಷ್ಟಾಗಿ ಗಮನಿಸ್ತಿರಲಿಲ್ಲ, ಆದರೆ ಅಂವ ಅಲ್ಲಿ ಇಲ್ಲಿ ನೋಡಿದ ಏನೇನೋ ವಿಷಯುವನ್ನ ಓದ್ದೋರು ನಾಚಿಗೆ ಪಟ್ಕೊಳ್ಳೊ ಹಂಗ ಯಥಾವತ್ತಾಗಿ ಬರ್‌ದ್ ಬಿಡ್ತಿದ್ದ ಆದ್ರೆ ಜನ ಏನೂ ಹೇಳೂ ಹಂಗಿರಲಿಲ್ಲ. ಹೇಳಿ ಕೇಳಿ ಹುಚ್ಚನ ಮಾತು.

ಇನ್ನೊಬ್ಬ ಹುಚ್ಚ ಮಾಸ್ತರ ಬಸವಣ್ಣೆಪ್ಪ, ಅಂತ ಇದ್ದ ಇತ್ತಿತ್ತಲಾಗಿ ತೀರ್‍ಕೊಂಡ, ತುಂಬಾ ಮಾತುಗಾರ, ಚಾಲಾಕಿ, ಚಪಲಿಗ, ಬಯಸಿದ್ದನ್ನ ಕೇಳಿ, ಕಾಡಿ ಪಡ್ಕೊತ್ತಿದ್ದ ಯಾರ್‍ಯಾರ ಮೇಲೋ ಹಾಡ್ ಕಟ್ಟಿ, ಕಥಿ ಕಟ್ಟಿ, ಹಾಡ್ತಿದ್ದ, ಸದಾ ಹಸನ್ಮುಖಿ, ಮಕ್ಕಳ ಹಾಗೆ ಆವನ ಸುತ್ತ ಯಾವಾಗಲೂ ಮಕ್ಕಳು ತುಂಬಿರುತ್ತಿದ್ದರು, ಆದರೂ ಹುಚ್ಚ ನೋಡಿ.

ಇನ್ನೊಬ್ಬ ನಮ್ಮೂರಿಂದ ಸ್ವಲ್ಪ ದೂರದ ಹಳ್ಳಿಯಲ್ಲಿದ್ದ ತರುಣ, ದೇಹ ದಷ್ಟ ಪುಷ್ಟವಾಗಿ ಬೆಳೆದರೂ ಬುದ್ಧಿ ಬೆಳೆಯದ ಮುಗ್ಧ, ಅವನನ್ನೊಮ್ಮೆ ಆ ಊರಿನ ಅತೃಪ್ತ ಕಾಮಿಯೊಬ್ಬಳು ಗುಟ್ಟಾಗಿ ಕೆಣಕಿ ಅವನಿಂದ ಸುಖ ಪಡೆದಳು, ಆದರೆ ಮುಂದೊಮ್ಮೆ ಆಕೆ ಕೇರಿಯ ಬಾವಿಗೆ ಬಂದಾಗ ಆ ಹುಚ್ಚ ಎಲ್ಲರೆದುರಿಗೆ ಆಕೆಯನ್ನು ಕರೆದಾಗ ಆಕೆಯ ಗುಟ್ಟು ರಟ್ಟಾಯಿತು, ಆದರೆ ಅಂವ ಮಾತ್ರ ಏನೂ ಆಗದವರಂತೆ ಮಗುವಿನಂತೆ ನಗುತ್ತ ನಿಂತಿದ್ದ.

ಇಂತಹವರನ್ನು ಬಿಟ್ಟರೆ ನಮ್‌ನಿಮ್‌ಗಿಂತ ಸಾಚಾ ಆಗಿರುವವರೆಂದರೆ ಕುಡುಕರು. ಕುಡಿದಾಗ ಅವರಲ್ಲಿ ಅರಳುವ ಪ್ರಕೃತಿ ಸಹಜ ಗುಣ-ಪಶು ಸಹಜ ಗುಣ ಸಹ ಬಾಳ್ವೆ, ಸಹಾನುಭೂತಿ ಕರುಣೆ, ದ್ವೇಷ ಸಹಜವಾಗಿ ಬೇರಾವ ಕ್ಷಣದಲ್ಲೂ ಕಾಣವು.

ನಮ್ಮವರ ಆಫೀಸಿನ ಮ್ಯಾನೇಜರ ಅವರ ವಿಚಾರಕ್ಕೆ ವಿರೋಧವಾಗಿದ್ದವರ ಬಗೆಗೆಲ್ಲ ಅವ್ರಿಗೆ ತಲೆ ಸರಿಯಿದ್ಯಾ ಅನ್ನುತ್ತಿದ್ದರಂತೆ, ಕೊನೆಗೊಮ್ಮೆ ಅವರ ಮೇಲಾಧಿಕಾರಿಗಳು ಅದೇ ಮ್ಯಾನೇಜರಿಗೆ 'ತಲೆ ಸರಿಯಿಲ್ಲ' ಎಂದು ಹೇಳಿ 'ನೀರಿಲ್ಲದ ಕಡೆಗೆ' ವರ್ಗಾಯಿಸಿದರಂತೆ. ಆಗ ಆ ಪುಣ್ಯಾತ್ಮನ್ನ ಯಾರಾದ್ರೂ ಮಾತಾಡಿಸಿದ್ರೆ 'ನನ್ ತಲೆ ಕೆಟ್ಟಿದೆ ಅವ್ರಿಗ್ ತಲೆ ಸರಿಯಿಲ್ಲ' ಇಂತಹ ಹೊತ್ನಲ್ಲಿ, ಅಂತಹ ಕಡೆ ಎತ್ತಿ ಹಾಕ್ಬೇಕಿದ್ರೆ ಅವ್ರೆಂತಹ ಹುಚ್ಚು ನೋಡಿ ಅಂತ ಕರ್‍ಕೊಂಡ್ರಂತೆ, ಒಟ್ನಲ್ಲಿ ಅಂತೂ ಇಂತೂ ಈ ಪ್ರಜಾಪ್ರಭುತ್ವದಲ್ಲಿ ನೀವ್ ಸರಿ ಇದ್ದೀರಿ ಅಂತ ಆನ್ಸ್ಕೊಳ್ಳಿಕ್ಕೂ ಹತ್ತರ ಜೊತೆ ಹನ್ನೊಂದು ಎಂಬಂತಿರ ಬೇಕು, ಇಲ್ಲಾಂದ್ರೆ ನೆನಪಿಡಿ, ಹುಚ್ಚ ಅನ್ನಸ್ಕೋಬೇಕಾಗ್ತದ 'ಹುಚ್ಚನ ಮಾತ್ಕೇಳಿ ರೊಚ್ಚಿಗ್ಯಾರ್ ಏಳ್ತಾರ......?

ಸೌಂದರ್ಯ ರಾಣಿ ಶೀತಲ ಯುದ್ಧ

ನಂದಿನಿ ಕಾಪಡಿ

ಎರಡು ತಿಂಗಳ ಕೆಳಗೆ, ನಮ್ಮ ಮದ್ರಾಸಿನಲ್ಲಿ ಭಾರೀ ಸಂಭ್ರಮ ! "ಮಿಸ್ ವರ್ಲ್ಡ್ ಐಶ್ವರ್ಯರಾಯ್ ನಿಮ್ಮ ಮನೆಯ ಬಾಗಿಲನ್ನು ಬಡಿಯುವಳು. ತೆರೆದೊಡನೆಯೇ ಪೆಪ್ಸಿ ಕೇಳುವಳು. ನೀವು ತಯಾರಾಗಿರುವಿರಾ" ? ಎಂಬ ದೊಡ್ಡ ಜಾಹೀರಾತು ಎಲ್ಲ ಪತ್ರಿಕೆಗಳಲ್ಲೂ ಬಂದವು. ಬೇಕಾದವರು ಸ್ಥಳೀಯ ಪೆಪ್ಸಿ ಮಾರುವ ಅಂಗಡಿಗಳನ್ನು ಸಂಪರ್ಕಿಸಬೇಕಿತ್ತು.

ನಮ್ಮ ಮನೆಯಲ್ಲಿ ಇಲ್ಲಿಯವರೆಗೆ ಪೇಪರುಗಳಲ್ಲಿ ಮಾತ್ರ ಓದಿದ್ದ "ಕೋಲಾ ವಾರ್" ಪ್ರಾರಂಭವಾಗಿಯಿತು. ದೊಡ್ಡ ಮಗಳು 'ಕೋಕ್' ಪ್ರೇಮಿಯಾದರೆ, ಎರಡನೆಯವಳು ಪೆಪ್ಸಿ ತನ್ನದೇ ಸ್ವತ್ತೆಂದು ಭಾವಿಸಿದ್ದಳು. ಆಪೇಯಾಗಳನ್ನು ಸಮರ್ಥಿಸುವ ಮಿಸ್ ಯೂನಿವರ್ಸ್ 'ಸುಶ್ಮಿತಾ ಸೇನ್ ಹಾಗೂ ಐಶ್ವರ್ಯ ರಾಯ್ ಇವರುಗಳ ಬಗ್ಗೆಯೂ ಜಗಳ 'ಸುಶ್' 'ಆ್ಯಶ್' ಹೀಗೆ ಮಾತು ಮಾತಿಗೂ ಬರುತ್ತಿದ್ದ ಉವಾಚಗಳು ! ಒಂದೆರಡು ಕೈ ಕೈ ಮಿಲಾಯಿಸುವುದೂ ಉಂಟು

ನಮ್ಮ ಮನೆಗೇನಾದರೂ ಆ್ಯಶ್ ಬಂದುಬಿಟ್ಟರೆ ಎಂಬ ತವಕದಿಂದ ತುರ್ತಾಗಿ ಪೆಪ್ಸಿಯ ಕ್ರೇಟ್‌ಗಳು ಬಂದಿಳಿದವು. ಇರುವ ಚಿಕ್ಕ ಫ್ರಿಜ್ಜಿನಲ್ಲಿದ್ದ ತರಕಾರಿ, ಹಣ್ಣು ಉಪ್ಪಿನಕಾಯಿ, ಜ್ಯಾಮುಗಳ ಬಾಟಲುಗಳೆಲ್ಲಾ ಹೊರ ಬಂದು, ಪೆಪ್ಸಿ ಬಾಟಲುಗಳು ತುಂಬಿಕೊಂಡವು. ನಾನೋ 'ತಂಗಳು ಪೆಟ್ಟಿಗೆಯ ಆರಾಧಕಳು. ಬಿಡುವಾದಾಗ ಅಡಿಗೆ, ತಿಂಡಿಗಳನ್ನು ಮಾಡಿಟ್ಟು ಶೀತಲೀಕರಿಸುವವಳು. ನನ್ನ ಚಿಕ್ಕ ಮಗಳ ಹುಮ್ಮಸ್ಸು ನನ್ನ ಹುಮ್ಮಸ್ಸಿಗೆ ಪೆಟ್ಟು ಕೊಟ್ಟು ಎಲ್ಲೆಲ್ಲೂ ಪೆಪ್ಸಿಯೋ ಪೆಪ್ಸಿಯಾಗಿ ಎಂಟು ದಿನಗಳ ಕೆಳಗೆ ಮಾಡಿದ್ದ ಒತ್ತು ಶ್ಯಾವಿಗೆ, ಆರು ದಿನಗಳ ಕೆಳಗೆ ಮಾಡಿದ್ದ ಚಿಕನ್ ಮಂಚೂರಿಯನ್, ನಾಲ್ಕು ದಿನಗಳ ಕೆಳಗೆ ಮಾಡಿಟ್ಟಿದ್ದ ದೋಸೆ ಹಿಟ್ಟು, ಎರಡು ದಿನಗಳ ಕೆಳಗೆ ರುಬ್ಬಿಟ್ಟಿದ್ದ ಹುಳಿಯ ಮಸಾಲೆ, ಕೆಳಗಿನ ಮನೆಯವರು ಕೊಟ್ಟಿದ್ದ ಗೋಂಕೂರ ಪಚ್ಚಡಿ, ಎದುರು ಮನೆ ಮಾಮಿ ಕೊಟ್ಟಿದ್ದ ವರ್ತ ಕೊಳಂಬು ಇವುಗಳೆಲ್ಲವೂ ಬಡಪಾಯಿಗಳಂತೆ ಹೊರ ಬಂದು ಮದ್ರಾಸಿನ ಬಿಸಿಲಿನಲ್ಲಿ ಕ್ಷಣದಲ್ಲಿ ಹಳಸಿ ಹೋದವು.

ತುಂಬಾ ಬೇಜಾರಾದರೂ "ಆ್ಯಶ್" ನಮ್ಮ ಮನೆಗೆ ಬರುವ ವಿಚಾರದಿಂದ ಒಮ್ಮೆಲೇ ಸಂಭ್ರಮ ಪಟ್ಟೆ ನಾನು. "ಆ್ಯಶ್" ಗಾಗಿ ಇನ್ನೂರು ರೂಪಾಯಿನ ಹೂ ಬುಟ್ಟಿ ಆರ್ಡರು ಮಾಡಿದಳು ನನ್ನ ಮಗಳು. ಕೋಕ್ ಪ್ರೇಮಿ ದೊಡ್ಡ ಮಗಳು "ಆ್ಯಶ್" ನಮ್ಮನ್ನು ಹಳ್ಳಿ ಜನ ಎಂದು ಕೊಂಡಾಳು. ಒಂದೆರಡು ಡಿಸೈನರ್ ಬಟ್ಟೆ ಕೊಡಿಸಿ ಬಿಡಮ್ಮಾ ಎಂದು ದುಂಬಾಲು ಬಿದ್ದಳು. ಯಜಮಾನರು ಎಲ್ಲೂ ಇಲ್ಲದ ಸಂಭ್ರಮ ತೋರುತ್ತಾ ವಿಡಿಯೋ ಮಾಡುವವನಿಗೆ ಹೇಳಿ ಬಂದರು, ಅಷ್ಟರಲ್ಲಿ ನನಗೆ ಹರಿದು ಹೋದ ಸೋಫಾ ಕವರ್ ಕಣ್ಣಿಗೆ ಬಿದ್ದು, ತಕ್ಷಣವೇ ದರ್ಜಿಯನ್ನು ಕರೆದು ಇನ್ನೂರು ರೂಪಾಯಿ ಮೀಟರಿನಂತೆ ಹೊಸ ಬಟ್ಟೆ ತರಿಸಿ ಕವರ್ ಹೊಲಿಸಿ ಬಿಟ್ಟೆ. ಯಜಮಾರು ಹಳೆಯ ಜಮಖಾನ ಬಿಸಾಕಿ ಬಿಡೋಣವೆಂದರು ಉದಾರ ಮನಸ್ಸಿನಿಂದ. ನನಗೆ ಒಳಗೊಳಗೇ ಸಂತೋಷವಾಯಿತು. ಇಷ್ಟೇಲ್ಲಾ ಸಂಭ್ರಮ್ವ ಒಂದು ಕಡೆಯಾದರೆ, ದೊಡ್ಡ ಮಗಳಿಗೆ ಒಮ್ಮೊಮ್ಮೆ ತಾನು ನಂಬಿದ್ದ ಕುದುರೆ. ಮಿಸ್ ಯುನಿವರ್ಸ್ ಎಂದೂ, ಆಕೆ ಕೋಕಾಕೋಲಾದ ತಾರೆಯೆಂದೂ ಜ್ಞಾಪಕಕ್ಕೆ ಬಂದು ಬಿಡುವುದು. ಮತ್ತೆ ಮನೆಯಲ್ಲಾ "ಕೀತಲ ಯುದ್ಧ" ಪ್ರಾರಂಭವಾಗಿ ಬಿಡುವುದು.

ಎದುರುಮನೆಯ ಸಾಂಬಶಿವನ್‌ರ ಮಗಳು ಕೃತ್ತಿಕಾ ತಾನೂ ಕೂಡಾ ಐಶ್ವರ್ಯ ರಾಯ್‌ನ ಪ್ರತೀಕ್ಷೆಯಲ್ಲಿರುವೆ ಎಂದಾಗ ನನ್ನ ಮಗಳಿಗೆ ಮತ್ಸರದ ಕಿಚ್ಚು, ಅಷ್ಟರಲ್ಲೇ ಅವಳ ಶಾಲೆಯಿಂದ ನೂರಾರು ಹುಡುಗಿಯರು ಇದೇ ಪ್ರತೀಕ್ಷೆಯಲ್ಲಿರು ವುದಾಗಿ ತಿಳಿದು ಬಂತು. ಒಬ್ಬ ಹುಡುಗಿಯಂತೂ ತನ್ನ ತಾಯಿ ಐಶ್ವರ್ಯಾರಾಯ್ ಬಂದರೆ ಕೊಡಬೇಕೆಂದು ಚಿನ್ನದ ಸರಪಳಿ ಮಾಡಿಸಿಟ್ಟಿದ್ದು ಹೇಳಿದಂತೆ. ಇನ್ನೊಬ್ಬ ಹುಡುಗಿಯ ಮನೆಯಲ್ಲಿ ಆರತಿ ಮಾಡುವ ಸಿದ್ದತೆ ಇರುವುದೆಂದು ಗೊತ್ತಾಗಿ ನಮ್ಮ ಬಡಪಾಯಿ ಸೋಫಾ, ಜಮಖಾನ ಎಲ್ಲವೂ ನಲುಗಿದವು.

ಮಾರನೆಯ ದಿನ ಐಶ್ವರ್ಯಾರಾಯ್ ಮದ್ರಾಸಿಗೆ ಬಂದಿಳಿದ ಸಮಾಚಾರ ಬಂದಿತು. ನಾವೆಲ್ಲ ಕಾತುರದಿಂದ ನಮ್ಮ ಬಾಗಿಲು ತಟ್ಟುವುದನ್ನೇ ಕಾಯುತ್ತಾ ಕುಳಿತೆವು. ಐದು ದಿನಗಳಾದವು. ಆ್ಯಶ್‌ನ ಸುಳಿವಿಲ್ಲ...ನನ್ನ ದೊಡ್ಡ ಮಗಳು 'ಸುಶ್' ನ ಹೊಗಳಿಕೆ ತಾರಕಸ್ಥಾಯಿಯಲ್ಲಿ ಮಾಡತೊಡಗಿದಳು. ನನಗಂತೂ ಎರಡು ದಿನಗಳ ಸಾಮಾನ್ಯರಜೆ ಹೀಗೆ ಮುಗಿದದ್ದು ಬೇಜಾರಾಗಿ ಮೂರನೇ ದಿನ ಕೆಲಸಕ್ಕೆ ಹಾಜರಾದೆ. ಆಫೀಸಿನಲ್ಲೂ ಇದೇ 'ಆ್ಯಶ್' ಪುರಾಣ. ಅದೇ ದಿನದ ಪತ್ರಿಕೆಯಲ್ಲಿ 'ಆ್ಯಶ್' ನಾಲ್ಕಾರು ಮನೆಗಳಿಗೆ ಹೋಗಿರುವ ಸಮಾಚಾರ ಛಾಪಿಸಲಾಗಿತ್ತು.

ಸಂಜೆಯಾಯಿತು. ಇನ್ನೇನು ಮನೆಗೆ ಹೋಗುವ ಸಮಯ. ಮಗಳಿಂದ ತುರ್ತಾಗಿ ಫೋನ್ ಬಂದಿತು. "ಈಗ ತಾನೇ ಪೆಪ್ಸಿಯವರಿಂದ ಫೋನ್ ಬಂದಿತ್ತು. ಆ್ಯಶ್ ಇನ್ನು ಒಂದು ಗಂಟೆಗೆ ಬರುವಳಂತೆ" ನಾನು ಚಂಗನೇ ಜಿಗಿದು ಕಾರಿನತ್ತ ನಡೆದೆ. ರಸ್ತೆಯ ನಿಯಮಗಳೊಂದನ್ನೂ ಲೆಕ್ಕಿಸದೆ ಕಾರು ನಡೆಸಿದೆ.

ಮನೆಗೆ ಬಂದು ಬೇಗ ಬೇಗ ಎಲ್ಲ ಸರಿ ಮಾಡಿದೆ. ಯಜಮಾನರು ದೊಡ್ಡ ಪ್ಯಾಕೆಟ್ಟಿನ ತುಂಬಾ ಕೇಕು, ಚಿಪ್ಸ್ ತಂದರು. ಅಷ್ಟರಲ್ಲಿ ಚಿಕ್ಕ ಮಗಳು ಬಂದು ಬಾಟಲ್ ಓಪನರ್ ಕಾಣೆಯಾಗಿದೆ. ಬೇಗನೇ ಅಂಗಡಿಗೆ ಹೋಗಿ ಹೊಸದು ತರಬೇಕು ಅಂದಳು. ಪಕ್ಕದ ಮನೆಯಿಂದ ತರುವುದು ಬೇಡ, ಅವಮಾನವಾಗುತ್ತೆ ಎಂದಳು,

ಇಷ್ಟೆಲ್ಲಾ ಅವಾಂತರದಲ್ಲಿ ಕಾಲಿಂಗ್ ಬೆಲ್ ಸದ್ದಾಗೇ ಬಿಟ್ಟಿತು. ಬಾಗಿಲನು ತೆರೆದು ಸೌಂದರ್ಯ ದೇವತೆ ಐಶ್ವರ್ಯಾರಾಯ್‌ನ ಸ್ವಾಗತಕ್ಕೆ ಎಲ್ಲರೂ ತಯಾರಾದೆವು. ನನ್ನ ಸೀರೆ ಸುಕ್ಕಾಗಿರುವುದು, ಹಣೆಯ ತುಂಬಾ ಬೆವರಿರುವುದು ಗಮನಕ್ಕೆ ಬರಲಿಲ್ಲ.

ಒಳಗೆ ಬಂದಳು 'ಸೌಂದರ್ಯ ದೇವತೆ.' ಪೆಪ್ಸಿ ಕುಡಿಯಲು ಮನಸ್ಸಿಲ್ಲ ಎಂದಳು. ಮೆಲ್ಲನೆ, "ಆಂಟಿ, ನೀವು ಮೈಸೂರಿನವರಲ್ಲವೆ ? ಫಿಲ್ಟರ್ ಕಾಫಿ ಇಟ್ಟಿದ್ದಿರಾ" ಎಂದಳು. ಥಳ ಥಳ ಹೊಳೆಯುವ ಸ್ಟೀಲ್ ಲೋಟದಲ್ಲಿ ಬಿಸಿ ಬಿಸಿ ಕಾಫಿ ಕುಡಿಯುತ್ತಾ, ಬಾಯಿತುಂಬಾ ಮಾತಾಡಿದಳು.

"ಅಮ್ಮ ಅಮ್ಮ ಆ್ಯಶ್ ನೋಡು ಹೊರಟೇ ಹೋದಳಂತೆ" ಎಂದು ಕೂಗುತ್ತಾ ಮಗಳು ಬಂದಳು. ಎಂತಹ ಕನಸನ್ನು ಬಿಡಿಸಿ ಬಿಟ್ಟಳಾ. ಎಂದುಕೊಂಡೇ, ಮೇಲೆದ್ದೆ.

ಕವನ ಸ್ಪರ್ಧೆ

– ವಿಕಟಕವಿ

ನಮ್ಮ ಓದುಗರ ಕುತೂಹಲ ಕೆರಳಿಸಲು ಒಂದು ಕವನ ಸ್ಪರ್ಧೆ ಏರ್ಪಡಿಸಿದ್ದೆವು. ಸಾಧಾರಣ ಸ್ಪರ್ಧೆಯಲ್ಲ! ಕವನ ತೀರ ಅಸಂಬದ್ಧ ಪ್ರಲಾಪವಾಗಿದ್ದು, ಅದರಲ್ಲಿ ಎಳ್ಳಷ್ಟು ಪ್ರತಿಭೆ, ನೈಜತೆ, ಅರ್ಥಗಳಿರಬಾರದು ಎಂದು ಎಚ್ಚರಿಸಿದ್ದೆವು. ಸುಮಾರು ಅರವತ್ತು ಕವನಗಳನ್ನು ಪೋಸ್ಟ್‌ಮ್ಯಾನ್ ತಂದೆಸೆದ. ಕೆಳಗೆ ಕಂಡ ಕವನಗಳನ್ನು ಜಯಶಾಲಿಗಳು ಎಂದು ಘೋಷಿಸಿ, ಸಂಪಾದಕರು ದೀರ್ಘ ರಜೆಗೆ ತೆರಳಿದಾರೆ! ಓದಿ, ಆನಂದಿಸಿ!

ಕವನ ಒಂದು (ಪ್ರಥಮ ಬಹುಮಾನ)

ತಾಯಿಯ ಹೃದಯ ರಾ. ಕ. ನಾಯಕ್
ಬೆಂಗಳೂರು


ಚಂದಿರನ ತಾಪ, ಆಹಾ,
ನನ್ನ ಜಾಣತನದ ಕುರಹು ತಾನೇ
ತಂದಿತು ನಗರದಾ ಗಲಭೆ!
ದೂರದಾ ಬೆಟ್ಟದ ಆಸೆ,
ಕಾವೇರಿಯ ಭಂಟರ ನಟನೆ!!


ಕವನ ಎರಡು (ದ್ವಿತೀಯ ಬಹುಮಾನ)

ಆತ್ಮ ಆನಂದ ಶಾಲಿನಿ, ಬೆಳಗಾಂ

ಕುರಿಗಳ ಸಾಲು ಬರಿ
ನಾಯಿಂದ ಭವಣೆ, ನನ್ನ
ಮನೆಯಿಂದರ ಕರ್ಣನ ದಾನದ ಶಬ್ದ!
ತಡೆಯಲಾಗದೆ ಓಡಿದೆ, ಬಾಯಿಯ
ಯಾಗಕ್ಕಾಗುತಿದೆ ನನ್ನ ಕರ್ಮ!!
ಕೋಕಾ ಕೋಲಾ, ಬರಿ ಸಂತೆ,
ಭಾರೀ ವರ್ತಕರ ಬಾಣ, ಬಿಲ್ಲು!

ಜಪಾನಿನ ನಾದ,
ಬರಿದಾದ ನಮ್ಮ ಕಾಗದ
ತಂದಿವೆ ಸಂತಸ, ಸಂತಸ!
ನಾಡಿನ ಆಗಸಕೆ
ತನ್ನಿ, ತರುಣರ ಕಾರ್ಮೋಡ!
ಆರು ಸಾಲುಗಳ ಇರುವೆ
ಕಾರಂಜಿ ಏರುತಿದೆ ಹಳ್ಳಕೆ.


ಕೋಟಿ ಕೋಟಿ ಗ್ರಾಹಕರ ಸಂತಸವೇ ನಮ್ಮ ಸ್ಫೂರ್ತಿ
ಕೆನರಾ ಬ್ಯಾಂಕ್
(ಭಾರತ ಸರ್ಕಾರದ ಉದ್ದಿಮೆ)
ಪ್ರಧಾನ ಕಚೇರಿ, ಜೆ ಸಿ. ರಸ್ತೆ, ಬೆಂಗಳೂರು 560 002



Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVAKUMAR.